## ಅಧ್ಯಾಯ–೩
# ಜನತೆ

ಮೈಸೂರು ತಾಲೂಕು ಹಲವು ಧರ್ಮೀಯರಿಗೆ ಆಶ್ರಯ ನೀಡಿದೆ. ವಿವಿಧ ಸಂಸ್ಕೃತಿಗಳ ಸಂಗಮವಾಗಿ ಬೆಳೆದು ಬಂದಿರುವ ಹಿಂದೂ ಧರ್ಮದ ಆಸರೆಯಲ್ಲೇ ರೂಪುಗೊಂಡಿರುವ ಅದ್ವೈತ, ದ್ವೈತ, ವಿಶಿಷ್ಟಾದ್ವೈತ ಪಂಥಗಳ ವೈಧಿಕ ಧರ್ಮ; ಶೈವ, ಲಕುಲೀಶ, ಪಾಶುಪತ ಮುಂತಾದ ಪಂಥಗಳನ್ನು ಖಂಡಿಸಿ ರೂಪುಗೊಂಡ ವೀರಶೈವ ಧರ್ಮ ಅಹಿಂಸೆಯನ್ನೇ ಪರಮ ಧ್ಯೇಯವಾಗಿಟ್ಟುಕೊಂಡ ಜೈನಧರ್ಮ; ಹೊರದೇಶಗಳಿಂದ ಪ್ರವೇಶಿಸಿ ಇಲ್ಲಿ ಬೇರುಬಿಟ್ಟ ಇಸ್ಲಾಂ ಮತ್ತು ಕ್ರೈಸ್ತಧರ್ಮಗಳು ಹಾಗೂ ಜನರ ಬದುಕಿನಲ್ಲಿ ಒಂದಾಗಿ ಅವರಿಂದಲೇ ಬೆಳೆದು ಬಂದ ಗ್ರಾಮೀಣ ದೇವತೆಗಳ ಆರಾಧನೆಯೇ ಪ್ರಧಾನವಾಗಿರುವ ಜನಪದ ಧರ್ಮ – ಇವುಗಳನ್ನು ಇಲ್ಲಿ ಪ್ರಧಾನವಾಗಿ ಕಾಣಬಹುದಾಗಿದೆ.

ಕೆಲವು ಕಡೆಗಳಲ್ಲಿ ಒಂದೇ ಧರ್ಮವನ್ನು ಆಚರಿಸುವ ಜನ ನೆಲೆ ನಿಂತಿರುತ್ತಾರಾದರೂ ಬಹುಪಾಲು ಊರುಗಳಲ್ಲಿ ವಿವಿಧ ಧರ್ಮದ ಜನ ಒಂದೆಡೆ ಕಲೆತಿರುತ್ತಾರೆ. ಈ ಸೌಹಾರ್ದತೆಯಿಂದಲೇ ವಿವಿಧತೆಯಲ್ಲಿ ಏಕತೆಯನ್ನು ಕಂಡುಕೊಳ್ಳುವುದು ಸಾಧ್ಯವಾಗುತ್ತದೆ. ಮೈಸೂರು ತಾಲೂಕಿನಲ್ಲೂ ವಿವಿಧ ಧರ್ಮಗಳ ಜನ ಒಂದೆಡೆ ಕಲೆತು ತಾಲೂಕನ್ನು ಸಹಬಾಳ್ವೆಯ ಕೇಂದ್ರವನ್ನಾಗಿ ಮಾಡಿದ್ದಾರೆಂಬುದು ಗಮನಾರ್ಹ.

**ಜನಸಂಖ್ಯೆ :** ಸಂಸ್ಥಾನದ ಸರ್ಕಾರವು ಅನುಸರಿಸಿದ ಖಾನೇಸುಮಾರಿ ಅಂದಾಜಿನಂತೆ ತಾಲೂಕಿನ ಜನಸಂಖ್ಯೆಯು ೧೮೫೩–೫೪ರಲ್ಲಿ ೯೫,೫೩೭ ಇದ್ದು, ಮುಂದೆ ೧೮೭೧ರಲ್ಲಿ ಜರುಗಿದ ಮೊದಲ ಅಧಿಕೃತ ಜನಗಣತಿಯಲ್ಲಿ ಇದು ೧,೯,೦೧೧ಕ್ಕೆ ಏರಿದರೆ ೧೮೮೧ರಲ್ಲಿ ೧,೨೦,೩೬೪ಕ್ಕೇರಿತು. ೧೮೯೧ರಲ್ಲಿ ಇದು ೧,೩೪,೬೮೪ಕ್ಕೇರಿತು. ಅಲ್ಲಿಂದೀಚೆಗೆ ಜನಸಂಖ್ಯಾ ಪ್ರಮಾಣದಲ್ಲಿ ಗಣನೀಯ ಹೆಚ್ಚಳ ಕಂಡುಬರಲಾರಂಭಿಸಿ, ೧೯೬೧ರ ವೇಳೆಗೆ ೩,೬೮,೦೦೫ ಕ್ಕೆ ಏರಿ, ೧೯೭೧ರಲ್ಲಿ ಅದು ೪,೯೩,೮೦೦ ತಲುಪಿತ್ತು. ಮುಂದೆ ೧೯೮೧ರಲ್ಲಿ ೬,೪೫,೧೦೪ಕ್ಕೇರಿದ ಇದು ೨೦೦೧ರಲ್ಲಿ

೧೦,೩೮,೪೯೦ಕ್ಕೆ ಏರಿತು. ಕಳೆದ ದಶಕದಲ್ಲಿ ಜನಸಂಖ್ಯಾ ಬೆಳವಣಿಗೆ ಪ್ರಮಾಣವು ಶೇ. ೨೧.೫ಕ್ಕೆ ಸೀಮಿತಗೊಂಡಿತ್ತು. ೨೦೧೧ರ ವೇಳೆಗೆ ತಾಲೂಕಿನ ಸಂಭವನೀಯ ಜನಸಂಖ್ಯೆಯು ೧೨,೧೧,೩೦೦ಕ್ಕೆ ಏರುವುದೆಂದು ನಿರೀಕ್ಷಿಸಲಾಗಿತ್ತು.

**ಜನಸಾಂದ್ರತೆ :** ತಾಲೂಕಿನಲ್ಲಿ ಪ್ರತೀ ಚ.ಕಿ.ಮೀ.ಗೆ ಇದ್ದ ಜನಸಾಂದ್ರತೆಯು ೧೯೭೧ರಲ್ಲಿ ೬೦೫ಕ್ಕೂ ೧೯೮೧ರಲ್ಲಿ ೭೯೧ಕ್ಕೆ ಅಧಿಕಗೊಂಡಿತು. ಇದು ೨೦೦೧ರ ಗಣತಿ ನಂತರ ೧,೨೫೪ಕ್ಕೆ ಏರುವ ಮೂಲಕ, ಜಿಲ್ಲೆಯ ಸರಾಸರಿ ಜನಸಾಂದ್ರತಾ ಪ್ರಮಾಣಕ್ಕಿಂತ (೩೮೫) ಹೆಚ್ಚಾಗಿತ್ತು.

**ಮನೆಗಳು ಹಾಗೂ ಕುಟುಂಬಗಳು :** ತಾಲೂಕಿನಲ್ಲಿ ೧೯೭೧ರ ಜನಗಣತಿಯಂತೆ ಇದ್ದ ೬೭,೧೪೩ (೧೮,೫೨೬ ಗ್ರಾಮೀಣ ಹಾಗೂ ೪೮,೬೧೭ ನಗರ) ಮನೆಗಳಲ್ಲಿ ೮೭,೦೫೧ (೨೩,೮೩೦ ಗ್ರಾಮೀಣ ಹಾಗೂ ೬೩,೨೨೧ ನಗರ) ಕುಟುಂಬಗಳು ವಾಸಿಸುತ್ತಿದ್ದವು. ಅದೇ ೧೯೮೧ರ ಜನಗಣತಿಯಲ್ಲಿ ತಾಲೂಕಿನಲ್ಲಿದ್ದ ೧,೦೭,೮೮೬ (೨೮,೮೮೬ ಗ್ರಾಮಾಂತರ ಹಾಗೂ ೭೯,೦೦೦ ನಗರದ) ಮನೆಗಳಲ್ಲಿ ೧,೦೯,೪೯೪ (೨೯,೧೨೪ ಗ್ರಾಮೀಣ ಹಾಗೂ ೮೦,೩೭೦ ನಗರ) ಕುಟುಂಬಗಳು ವಾಸಿಸುತ್ತಿದ್ದವು. ಅದೇ ೨೦೦೧ರ ವೇಳೆಗೆ ತಾಲೂಕಿನಲ್ಲಿ ೨,೧೭,೨೦೮ (೪೮,೪೭೯ ಗ್ರಾಮೀಣ ಹಾಗೂ ೧,೬೮,೭೨೯ ನಗರ) ಕುಟುಂಬಗಳು ನೆಲೆಸಿದ್ದವು.

**ಸಾಂಸ್ಥಿಕ ಜನಸಂಖ್ಯೆ :** ವಿದ್ಯಾರ್ಥಿ ನಿಲಯ, ವಸತಿಗೃಹ, ಜೈಲು, ಆಸ್ಪತ್ರೆ, ವೃದ್ಧಾಶ್ರಮ, ಅನಾಥಾಶ್ರಮ, ಮಠ ಮುಂತಾದ ಸಂಸ್ಥೆಗಳಲ್ಲಿರುವವರನ್ನು ಸಾಂಸ್ಥಿಕ ಜನಸಂಖ್ಯೆಯಡಿ ಪರಿಗಣಿಸಲಾಗುತ್ತಿದ್ದು, ಅದರಂತೆ ೧೯೭೧ರಲ್ಲಿ ತಾಲೂಕಿನಲ್ಲಿದ್ದ ೬೦೨ (೧೩೬ ಗ್ರಾಮೀಣ, ೪೬೬ ನಗರ) ಸಂಸ್ಥೆಗಳಲ್ಲಿ ೯೦೧೦ (೫೫ ಗ್ರಾಮೀಣ ಹಾಗೂ ೮೯೫೫ ನಗರ) ಪುರುಷರು ಹಾಗೂ ೨೩೫೫ (೭೨ ಗ್ರಾಮೀಣ ಹಾಗೂ ೨೨೮೩ ನಗರ) ಮಹಿಳೆಯರು ವಾಸಿಸುತ್ತಿದ್ದರು. ಅದೇ ೧೯೮೧ರಲ್ಲಿ ತಾಲೂಕಿನಲ್ಲಿದ್ದ ೫೬೨ (೨ ಗ್ರಾಮೀಣ ಹಾಗೂ ೫೬೦ ನಗರ) ಸಂಸ್ಥೆಗಳಲ್ಲಿ ೯,೨೮ (೪೮ ಗ್ರಾಮೀಣ ಹಾಗೂ ೯,೨೫೦ ನಗರ) ಪುರುಷರು ಹಾಗೂ ೩,೨೩೬ (೧೦ ಗ್ರಾಮೀಣ ಹಾಗೂ ೩೨೨೬ ನಗರ) ಮಹಿಳೆಯರು ಆಶ್ರಯ ಪಡೆದಿದ್ದರು.

**ವಸತಿರಹಿತರು :** ವಾಸದ ಮನೆಯನ್ನು ಹೊಂದಿರದ ಇವರು ಗುಡಿ, ಗುಂಡಾರ, ರಸ್ತೆಬದಿ ಮುಂತಾದೆಡೆ ವಾಸಿಸುತ್ತಿದ್ದು, ಹೆಚ್ಚಿನವರು ಭಿಕ್ಷುಕರು ಇಲ್ಲವೇ ತಿರುಕರಾಗಿರುತ್ತಾರೆ. ತಾಲೂಕಿನಲ್ಲಿ ೧೯೭೧ರಲ್ಲಿ ಈ ವರ್ಗಕ್ಕೆ ಸೇರಿದ ೫೭೬ (೭೧ ಗ್ರಾಮೀಣ ಹಾಗೂ ೫೦೫ ನಗರ) ಕುಟುಂಬಗಳಿದ್ದು, ೯೮೮ (೧೪೧ ಗ್ರಾಮೀಣ ಹಾಗೂ ೮೪೭ ನಗರ) ಪುರುಷರನ್ನೂ ೫೪೮ (೧೮೬ ಗ್ರಾಮೀಣ ಹಾಗೂ ೩೬೨ ನಗರ) ಮಹಿಳೆಯರನ್ನೂ ಒಳಗೊಂಡಿದ್ದವು. ಅದೇ ೧೯೮೧ರಲ್ಲಿ ತಾಲೂಕಿನಲ್ಲಿದ್ದ ೪೯೦ (೩೬ ಗ್ರಾಮೀಣ ಹಾಗೂ ೫೫೪ ನಗರ) ಕುಟುಂಬಗಳಲ್ಲಿ ೮೬೩ (೭೫ ಗ್ರಾಮೀಣ

ಹಾಗೂ ೭೮೮ ನಗರ) ಪುರುಷರು ಹಾಗೂ ೫೧೦ (೫೮ ಗ್ರಾಮೀಣ ೪೫೨ ನಗರ) ಮಹಿಳೆಯರು ಇದ್ದರು.

**ಸ್ತ್ರೀ–ಪುರುಷ ಪ್ರಮಾಣ :** ಪ್ರತಿ ೧೦೦೦ ಪುರುಷರಿಗೆ ಇರುವ ಮಹಿಳೆಯರ ಸಂಖ್ಯೆಯನ್ನು ಸ್ತ್ರೀ ಪುರುಷ ಪ್ರಮಾಣ ಎಂದು ಕರೆಯಲಾಗುತ್ತದೆ. ತಾಲೂಕಿನಲ್ಲಿ ಸ್ತ್ರೀ–ಪುರುಷ ಪ್ರಮಾಣವು ೧೯೭೧ರಲ್ಲಿ ೯೧೫.೫೬ (೯೩೩.೮೬ ಗ್ರಾಮೀಣ ಹಾಗೂ ೯೦೮.೫೪ ನಗರ) ಇತ್ತು. ಇದು ೧೯೮೧ರಲ್ಲಿ ೯೩೮.೦೨ (೯೪೦.೭೯ ಗ್ರಾಮೀಣ ಹಾಗೂ ೯೩೭.೦೬ ನಗರ)ಕ್ಕೇರಿದರೂ, ಜಿಲ್ಲಾ ಪ್ರಮಾಣವಾದ ೯೫೦.೬೨ (೯೫೫.೭೯ ಗ್ರಾಮೀಣ ಹಾಗೂ ೯೩೨.೮೮ ನಗರ) ಕ್ಕಿಂತ ಕಡಿಮೆ ಇತ್ತು. ಇದು ೨೦೦೧ರಲ್ಲಿ ೯೬೧ಕ್ಕೆ ಏರಿತು. ಆದರೆ ಜಿಲ್ಲಾ ಪ್ರಮಾಣ (೯೬೪) ಹಾಗೂ ರಾಜ್ಯ ಪ್ರಮಾಣ (೯೬೫)ಗಳಿಗಿಂತ ಸ್ವಲ್ಪ ಕಡಿಮೆ ಇತ್ತು.

**ಗ್ರಾಮೀಣ ಜನಸಂಖ್ಯೆ :** ತಾಲೂಕಿನ ಗ್ರಾಮೀಣ ಭಾಗದಲ್ಲಿದ್ದ ೧೪೩ (೧೩೧ ವಸತಿ ಹಾಗೂ ೧೨ ನಿರ್ವಸತಿ) ಗ್ರಾಮಗಳಲ್ಲಿ ೧೯೬೧ರಲ್ಲಿ ೧,೧೪,೧೪೦ ಜನರು ವಾಸಿಸುತ್ತಿದ್ದು, ೧೯೮೧ರ ವೇಳೆಗೆ ಇದು ೧,೬೬,೦೨೩ಕ್ಕೆ ಏರಿತ್ತು. ೨೦೦೧ರ ಜನಗಣತಿಯಂತೆ ೨,೩೯,೨೬೨ ಜನರು ವಾಸಿಸುತ್ತಿದ್ದು, ಇದು ತಾಲೂಕಿನ ಒಟ್ಟು ಜನಸಂಖ್ಯೆಯ ಶೇ. ೨೩ ರಷ್ಟಿತ್ತು.

**ಪಟ್ಟಣ ಜನಸಂಖ್ಯೆ :** ತಾಲೂಕು ಕೇಂದ್ರ ಮೈಸೂರು, ತಾಲೂಕಿನ ಏಕೈಕ ನಗರವಾಗಿದ್ದು, ೧೯೬೧ರಲ್ಲಿ ೨,೫೩,೮೬೫ ಜನಸಂಖ್ಯೆಯನ್ನು ಇದು ಹೊಂದಿತ್ತು. ಅದೇ ೧೯೮೧ರ ವೇಳೆಗೆ ಇದು ೪,೭೯,೦೮೧ಕ್ಕೆ ಹೆಚ್ಚಳಗೊಂಡಿತ್ತು. ೨೦೦೧ರಲ್ಲಿ ತಾಲೂಕಿನ ಪಟ್ಟಣ ಜನಸಂಖ್ಯೆಯು ೭,೯೯,೨೨೮ ಆಗಿದ್ದು, ಇದು ತಾಲೂಕಿನ ಒಟ್ಟು ಜನಸಂಖ್ಯೆಯ ಶೇ. ೭೭ ರಷ್ಟಿತ್ತು.

**ಅಂಗವಿಕಲರು :** ಅಂಗವಿಕಲ ಜನರ ಗಣತಿಯನ್ನು ೧೯೩೧ರವರೆಗೆ ನಡೆಸಲಾಯಿತಾದರೂ ೧೯೪೧ರಲ್ಲಿ ಕೈಬಿಡಲಾಯಿತು. ಆದರೆ ಮುಂದೆ ೧೯೮೧ರಿಂದ ಅದನ್ನು ಪುನರಾರಂಭಿಸಲಾಯಿತು. ಆರಂಭದಲ್ಲಿ ಕುರುಡರು – ಕಿವುಡರು – ಕುಂಟರನ್ನು ಗಣಿಸಲಾಗುತ್ತಿದ್ದು, ಅದರಂತೆ ೧೯೮೧ರಲ್ಲಿ ೩೦೧ ಕುರುಡರು, ೩೯ ಕಿವುಡರು ಹಾಗೂ ೨೪೮ ಅಂಗವಿಕಲರು ತಾಲೂಕಿನಲ್ಲಿದ್ದರು. ಅಂಗವಿಕಲರಿಗಾಗಿ ಸರ್ಕಾರ ನೀಡುವ ಮಾಸಿಕ ೫೦ ರೂ.ಗಳ ವೇತನವನ್ನು ೧೯೮೭ರ ವೇಳೆಗೆ ತಾಲೂಕಿನ ೪,೧೬೯ ಅಂಗವಿಕಲರು ಪಡೆಯುತ್ತಿದ್ದರು. ೨೦೦೧ರ ಜನಗಣತಿಯಂತೆ ತಾಲೂಕಿನಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಅಂಗವಿಹೀನರಿದ್ದರು. ೨೦೦೯ರ ಮಾರ್ಚ್ ಅಂತ್ಯಕ್ಕೆ ತಾಲೂಕಿನಲ್ಲಿ ೮೪೬೯ ಮಂದಿ ಅಂಗವಿಕಲರು ಮಾಸಾಶನ ಪಡೆಯುತ್ತಿದ್ದರು.

**ಪರಿಶಿಷ್ಟ ಜಾತಿ :** ಸಂವಿಧಾನದ ೩೪೧ನೆಯ ಪರಿಚ್ಛೇದದನ್ವಯ ಆದಿ ಕರ್ನಾಟಕ, ಆದಿದ್ರಾವಿಡ, ಬೋವಿ, ಮಾದಿಗ, ಮೋಚಿ, ಹೊಲೆಯ, ಕೊರಮ, ಲಮಾಣಿ, ಹಂದಿ

ಜೋಗಿ, ಜಾಂಬವ, ಚಮ್ಮಾರ, ಮಾದರ, ಮುಂತಾದವನ್ನು ಪರಿಶಿಷ್ಟ ಜಾತಿಯವರೆಂದು ಪಟ್ಟಿ ಮಾಡಲಾಗಿದೆ. ಆ ಪ್ರಕಾರ ೧೯೭೧ರಲ್ಲಿ ತಾಲೂಕಿನಲ್ಲಿ ಪರಿಶಿಷ್ಟ ಜಾತಿಯ ೫೩,೬೯೩ (೨೨,೪೧೨ ಗ್ರಾಮೀಣ ಹಾಗೂ ೩೧,೨೮೧ ಪಟ್ಟಣ) ಜನರಿದ್ದರು. ಅದೇ ೨೦೦೧ರ ಗಣತಿಯನ್ವಯ ಇವರ ಒಟ್ಟು ಜನಸಂಖ್ಯೆಯು ೧೩೨,೬೦೭ಕ್ಕೆ (೪೨,೬೪೦ ಗ್ರಾಮೀಣ ಹಾಗೂ ೮೯,೯೬೫ ಪಟ್ಟಣ) ಏರಿತ್ತು.

**ಪರಿಶಿಷ್ಟ ಪಂಗಡ :** ಸಂವಿಧಾನದ ೩೪೨ನೆಯ ಪರಿಚ್ಛೇದದನ್ವಯ ಹಕ್ಕಿಪಿಕ್ಕಿ, ಇರುಳಿಗ, ಜೇನುಕುರುಬ, ಕಾಡುಕುರುಬ, ಕೊಂಡಕಾಪು, ಗೌಡಲು, ಡೋಲಿಗ, ಕೊರಗ, ಕಣಿಯ, ಕುರುಮ ಮುಂತಾದ ಬುಡಕಟ್ಟಿನ ಜನರನ್ನು ಪರಿಶಿಷ್ಟ ಪಂಗಡದವರೆಂದು ಪರಿಗಣಿಸಲಾಗಿದೆ. ಆ ಪ್ರಕಾರ ೧೯೭೧ರ ಜನಗಣತಿಯಂತೆ ತಾಲೂಕಿನಲ್ಲಿ ಕೇವಲ ೬೩೩ (೨೭ ಗ್ರಾಮಾಂತರ ೬೦೬ ನಗರ) ಮಂದಿ ಪರಿಶಿಷ್ಟ ಪಂಗಡಗಳಿಗೆ ಸೇರಿದ ಜನರಿದ್ದರು. ಅದೇ ೨೦೦೧ರ ಗಣತಿಯಂತೆ ಈ ಗುಂಪಿಗೆ ಸೇರಿದ ಒಟ್ಟು ಜನಸಂಖ್ಯೆಯು ೬೨,೭೬೨ (೩೨,೩೩೧ ಗ್ರಾಮಾಂತರ ಹಾಗೂ ೩೦,೪೩೧ ನಗರ) ಕ್ಕೆ ಹೆಚ್ಚಳಗೊಂಡಿತು.

**ಭಾಷೆಗಳು :** ತಾಲೂಕಿನಲ್ಲಿ ವಿವಿಧ ಭಾಷೆಗಳನ್ನು ಮಾತೃಭಾಷೆಯನ್ನಾಗಿ ಹೊಂದಿರುವ ಜನರಿದ್ದಾರೆ. ೧೯೭೧ರ ಜನಗಣತಿಯಂತೆ ತಾಲೂಕಿನ ಒಟ್ಟು ಜನಸಂಖ್ಯೆಯಲ್ಲಿ ೩,೩೨,೦೧೧ (೬೭.೨೭%) ಜನ ಕನ್ನಡ ಮಾತೃಭಾಷಿಕರು, ೭೦,೦೨೯ ಮಂದಿ ಉರ್ದು ಮಾತೃಭಾಷಿಕರು, ೨೫,೯೭೧ ಜನ ತೆಲುಗು ಮಾತೃಭಾಷಿಕರು, ೧೧,೪೨೩ ಮಂದಿ ಮರಾಠಿ ಹಾಗೂ ೨,೩೨೩ ಮಂದಿ ತುಳು ಮಾತೃಭಾಷಿಕರಿದ್ದರು. ೨೦೦೧ರ ಜನಗಣತಿಯಂತೆ ತಾಲೂಕಿನಲ್ಲಿ ೭,೧೧,೨೩೮ ಮಂದಿ ಕನ್ನಡ, ೧,೫೬,೭೪೦ ಮಂದಿ ಉರ್ದು, ೫೦,೫೯೦ ಮಂದಿ ತೆಲುಗು, ೪೭,೫೯೨ ಮಂದಿ ತಮಿಳು, ೧೭,೩೪೩ ಮಂದಿ ಹಿಂದಿ, ೧೩,೦೪೬ ಮಂದಿ ಮಲೆಯಾಳಿ, ೨೦,೧೧೧ ಮಂದಿ ಮರಾಠಿ, ೫,೨೬೪ ಮಂದಿ ಕೊಂಕಣಿ, ೫೨೭೯ ಜನ ಕೊಡವ, ೫೭೮೨ ಜನ ತುಳು, ೧೦೭೬ ಜನ ಗುಜರಾತಿ, ೯೨೩ ಜನ ಬಂಗಾಳಿ, ೯೨೧ ಜನ ಇಂಗ್ಲೀಷ್, ೨೯೫ ಮಂದಿ ಪಂಜಾಬಿ, ೨೨೬ ಮಂದಿ ನೇಪಾಳಿ, ೨೭೯ ಮಂದಿ ಒರಿಯಾ, ೮೬೫ ಮಂದಿ ಸಿಂಧಿ, ೯೧ ಮಂದಿ ಮಣೀಪುರಿ, ೬೫ ಮಂದಿ ಅರಬ್ಬಿ, ೬೧ ಮಂದಿ ಸಂಸ್ಕೃತ, ೫೩ ಮಂದಿ ಬಿಲ್ಲೋಡಿ, ೫೬ ಮಂದಿ ಕಾಶ್ಮೀರಿ, ೫೭ ಮಂದಿ ಅಸ್ಸಾಮಿ, ೫೯ ಮಂದಿ ಲಡಕಿ, ೪೩ ಮಂದಿ ಟಿಬೆಟ್ ಹಾಗೂ ೩೩೭ ಮಂದಿ ಇನ್ನಿತರೇ ಮಾತೃಭಾಷೆಗಳನ್ನಾಡುವವರಾಗಿದ್ದರು.

## ಧರ್ಮಗಳು

ದೇಶದ ಇತರೆಡೆಯಂತೆ ಕರ್ನಾಟಕವೂ ವೈವಿಧ್ಯತೆಯ ಆಗರವಾಗಿದ್ದು, ಮೈಸೂರು ತಾಲೂಕು ಕೂಡ ಇದಕ್ಕೆ ಹೊರತಾಗಿಲ್ಲ. ೧೯೮೧ರ ಜನಗಣತಿಯಂತೆ ಈ ತಾಲೂಕಿನಲ್ಲಿ ೫,೨೫,೩೨೬ ಹಿಂದೂ, ೯೮,೦೯೨ ಮುಸ್ಲಿಂ, ೧೫,೮೦೮ ಕ್ರೈಸ್ತ, ೪,೫೫೩ ಜೈನ,

೩೬ ಬೌದ್ಧ, ೧,೧೧೨ ಇತರೇ ಧರ್ಮೀಯರಿದ್ದರೆ, ನಾಲ್ಕು ಮಂದಿ ಯಾವುದೇ ಧರ್ಮವನ್ನು ಸೂಚಿಸಿರಲಿಲ್ಲ. ೨೦೦೧ರ ಗಣತಿಯಂತೆ ತಾಲೂಕಿನಲ್ಲಿ ೮,೩೬,೭೧೩ ಜನ ಹಿಂದೂ, ೧,೬೧,೧೦೫ ಜನ ಮುಸ್ಲಿಂ, ೨೬,೬೬೭ ಜನ ಕ್ರಿಶ್ಚಿಯನ್ ೯,೧೩೫ ಮಂದಿ ಜೈನರು, ೨೦೬೫ ಜನ ಬೌದ್ಧ, ೪೧೩ ಮಂದಿ ಸಿಖ್ಖ್ ಹಾಗೂ ೬೩೦ ಜನ ಇತರೇ ಧರ್ಮಿಯರಾಗಿದ್ದರೆ, ಉಳಿದ ೧,೭೫೬ ಜನ ಯಾವುದೇ ಧರ್ಮವನ್ನು ಸೂಚಿಸಿರಲಿಲ್ಲ.

**ಹಿಂದೂ ಧರ್ಮ :** ಕರ್ನಾಟಕವು ಅನೇಕ ಧರ್ಮಗಳ ನೆಲೆಬೀಡಾಗಿದ್ದರೂ ಬಹುಪಾಲು ಹಿಂದೂ ಧರ್ಮೀಯರಾಗಿದ್ದಾರೆ. ಇವರು ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲಿಯು ನೆಲೆಸಿದ್ದಾರೆ. 'ಹಿಂದೂ' ಎಂಬ ಪದವು ಸಿಂಧೂ ಪದದ ಮೂಲದಿಂದ ಉಗಮವಾಗಿದ್ದು, ವಿಶ್ವದ ಧರ್ಮಗಳ ಪೈಕಿ ಸನಾತನ ಅಥವಾ ಅತ್ಯಂತ ಪ್ರಾಚೀನ ಧರ್ಮವೆಂದು ಜನಪ್ರಿಯವಾಗಿದೆ. ಪ್ರಸಿದ್ಧ ಇತಿಹಾಸಕಾರ ವಿಲ್‌ಡ್ಯೂರಾಂಟ್ 'ಹಿಂದೂ ಧರ್ಮವು ವಿಶ್ವದ ಎಲ್ಲಾ ಧರ್ಮಗಳಿಗೆ ಮಾತೃಸ್ಥಾನದಲ್ಲಿದೆ' ಎಂದು ಅಭಿಪ್ರಾಯಪಟ್ಟಿದ್ದಾನೆ. ಹಿಂದೂ ಧರ್ಮವು ಕೇವಲ ಏಕೈಕ ಪ್ರವಾದಿಯಿಂದ ಪ್ರತಿಪಾದಿತವಾಗಿರದೇ ಹಲವಾರು ಋಷಿ ಮುನಿಗಳ ಅಧ್ಯಾತ್ಮಿಕ ಅನುಭವದ ಫಲವಾಗಿ ಅನಾದಿಕಾಲದಿಂದಲೂ ಆಚರಣೆಗೆ ಬಂದುದರಿಂದ ಈ ಧರ್ಮಕ್ಕೆ ಸನಾತನ ಧರ್ಮವೆಂದು ಕರೆಯಲಾಗುತ್ತದೆ. ವೇದಗಳನ್ನು ಅಪೌರುಷೇಯವೆಂದು ಪರಿಗಣಿಸಲಾಗಿದ್ದು, ದೇವಾನುದೇವತೆಗಳಿಂದ ಮೌಖಿಕವಾಗಿ ಬಂದಿತೆಂಬ ಅಭಿಪ್ರಾಯವೂ ಹಿಂದೂಗಳಲ್ಲಿದೆ. ಕೆಲವು ವಿದ್ವಾಂಸರ ಪ್ರಕಾರ ಹಿಂದೂ ಧರ್ಮವು ಕೇವಲ ಆಧ್ಯಾತ್ಮಗಳಿಂದ ಕೂಡಿದ ಧರ್ಮವಾಗಿರದೇ ಹೆಚ್ಚಾಗಿ ಮನುಕುಲದ ಉನ್ನತ ಆದರ್ಶಗಳನ್ನೊಳಗೊಂಡ ಜೀವನ ಮಾರ್ಗವಾಗಿದೆ.

ಹಿಂದೂ ಧರ್ಮದ ಪ್ರಮುಖ ಪಂಥಗಳಾದ ಅದ್ವೈತ, ವಿಶಿಷ್ಟಾದ್ವೈತ ಮತ್ತು ದ್ವೈತ ಕ್ರಿ.ಶ. ಒಂಭತ್ತನೇ ಶತಮಾನದ ನಂತರ ಪ್ರತಿಪಾದನೆಗೊಂಡವು. ಕ್ರಿ.ಶ. ಒಂಭತ್ತನೇ ಶತಮಾನದಲ್ಲಿ ಕೇರಳದ ಕಾಲಟಿಯಲ್ಲಿ ಜನಿಸಿದ ಆದಿಶಂಕರಾಚಾರ್ಯರು ಅದ್ವೈತ ಮತವನ್ನು ಪ್ರತಿಪಾದಿಸಿದರು. ಇವರು ಪ್ರಥಮ ಬಾರಿಗೆ ಆತ್ಮನಲ್ಲೇ ಪರಮಾತ್ಮನು ಅಸ್ತಿತ್ವದಲ್ಲಿರುವುದರಿಂದ "ಅಹಂ ಬ್ರಹ್ಮಾಸ್ಮಿನ್" ಹಾಗೂ 'ತತ್ವಮಸಿ' ತತ್ವಗಳನ್ವಯ ಅದ್ವೈತವನ್ನು ಬೋಧಿಸಿದರು. ದೇವಾನು ದೇವತೆಗಳ ಐಕ್ಯತೆಯನ್ನು ಸಾಮಾನ್ಯರಿಗೆ ದರ್ಶನ ಮಾಡಿಸಿದರು. ಆಕಾಶದಿಂದ ಭೂಮಿಗೆ ಬಿದ್ದ ಸಹಸ್ರಾರು ಮಳೆಯ ಹನಿಗಳು ಏಕರೂಪವಾಗಿ ಹರಿದು ಸಾಗರಕ್ಕೆ ಸೇರುವ ರೀತಿಯಲ್ಲಿ ಸರ್ವಶಕ್ತನಾದ ಬ್ರಹ್ಮನೊಬ್ಬನೇ ಸತ್ಯ, ಜಗತ್ತು ಮಿಥ್ಯೆ ಹಾಗೂ ಪುನರ್‌ಜನ್ಮವು ಸಹಜವಾದ ಪ್ರಕ್ರಿಯೆಯೆಂದು ಪ್ರತಿಪಾದಿಸಿದ ಕಾರಣ ಈ ಪಂಥಕ್ಕೆ 'ಅದ್ವೈತ'ವೆಂಬ ಹೆಸರು ರೂಢಿಗೆ ಬಂದಿತು. ಎಲ್ಲಾ ಆತ್ಮರೂ ಏಕರೀತಿಯ ಮೋಕ್ಷವನ್ನು ಪಡೆಯುವರು ಎಂಬುದು ಆದಿಶಂಕರಾಚಾರ್ಯರ ದೃಢವಾದ ಅಭಿಪ್ರಾಯವಾಗಿತ್ತು. ಕ್ರಿ.ಶ. ೧೧ನೇ ಶತಮಾನದಲ್ಲಿ ತಮಿಳುನಾಡಿನ ಶ್ರೀಪೆರಂಬುದೂರಿನಲ್ಲಿ ಜನ್ಮತಾಳಿದ ರಾಮಾನುಜಾಚಾರ್ಯರು ಬ್ರಹ್ಮನು 'ಚಿತ್' ಮತ್ತು 'ಸಚಿತ್' ಎಂಬ ವಿಶೇಷವಾದ ಗುಣಗಳನ್ನು ಹೊಂದಿರುವುದರಿಂದ ಆತನ ಸಾಕ್ಷಾತ್ಕಾರವು ಸಾಧ್ಯವೇ

ಹೊರತು ಆತನೊಂದಿಗೆ ಮಿಲನ ಸಾಧ್ಯವಿಲ್ಲವೆಂದು ಪ್ರತಿಪಾದಿಸಿದರು. ಈ ಪಂಥಕ್ಕೆ ವಿಶಿಷ್ಟಾದ್ವೈತವೆಂದು ಕರೆದು ಅದರ ಹಿಂಬಾಲಕರನ್ನು ಶ್ರೀವೈಷ್ಣವರೆಂದು ಪರಿಗಣಿಸಲಾಯಿತು. ಶ್ರೀವೈಷ್ಣವರಲ್ಲಿ ಆತ್ಮನು ಸ್ವಯಂ ಸಾಧನೆಯಿಂದ ಬ್ರಹ್ಮಜ್ಞಾನವನ್ನು ಪಡೆಯುವುದರ ಮೂಲಕ ಮೋಕ್ಷವನ್ನು ಗಳಿಸಬಹುದೆಂದು ರಾಮಾನುಜಾಚಾರ್ಯರು ಪ್ರತಿಪಾದಿಸಿದ್ದಾರೆ. ಕರ್ನಾಟಕದ ಉಡುಪಿಯ ಬಳಿಯ ಪಾಜಕ ಅಥವಾ ಬೆಳ್ಳೆಯಲ್ಲಿ ಜನ್ಮ ತಾಳಿದ ಮಧ್ವಾಚಾರ್ಯರು ಆತ್ಮ ಮತ್ತು ಪರಮಾತ್ಮರ ನಡುವೆ ಇರುವ ಪಂಚಬೇಧ ತಾರತಮ್ಯಗಳನ್ನು ಪ್ರತಿಪಾದಿಸಿದರು. ಈ ಕಾರಣದಿಂದಾಗಿ ಈ ಪಂಥಕ್ಕೆ 'ದ್ವೈತಮತ'ವೆಂದು ಕರೆಯಲಾಯಿತು. ಈ ಪಂಥದ ಪ್ರಕಾರ ಆತ್ಮ-ಪರಮಾತ್ಮನ ಸಂಬಂಧಗಳು ಸಂಪೂರ್ಣವಾಗಿ ದಾಸತ್ವದ ಸಂಕೇತವಾಗಿದ್ದು, ಸರ್ವಶಕ್ತನಾದ ವಿಷ್ಣುವಿನ ಹರಿ ಸರ್ವೋತ್ತಮತ್ವವನ್ನು ಮಧ್ವಾಚಾರ್ಯರು ಬೋಧಿಸಿದರು. ಅವರ ಪ್ರಕಾರ ಪ್ರತಿಯೊಬ್ಬ ವ್ಯಕ್ತಿಯೂ ಅವನ ಮಟ್ಟಿಗೆ ಜ್ಞಾನ ಪರಿಪೂರ್ಣತೆಯನ್ನು ಹೊಂದಿರುತ್ತಾನೆ. ಯಾವುದೇ ಕಾರಣಕ್ಕೂ ಸರ್ವಗುಣ ಪರಿಪೂರ್ಣನಾದ ಬ್ರಹ್ಮನು (ಭಗವಂತನು) ಆತ್ಮನಿಗೆ ಸಮಾನನಾಗುವುದಿಲ್ಲ. ಆತ್ಮನು ಇಹ ಮತ್ತು ಪರಲೋಕಗಳಲ್ಲಿ ಪರಮಾತ್ಮನ ಅಧೀನನಾಗಿರುತ್ತಾನೆಂಬ ದಾಸತ್ವಭಾವವನ್ನು ಪ್ರಥಮ ಬಾರಿಗೆ ಪ್ರತಿಪಾದಿಸಿದರು. ಅಲ್ಲದೆ, ಆಯಾ ವ್ಯಕ್ತಿಯ ಸಾಧನೆಯ ಮೇರೆಗೆ ಯೋಗ್ಯತಾನುಸಾರ ಮೋಕ್ಷವು ಲಭಿಸುತ್ತದೆಂದೂ ಬೋಧಿಸಿದರು. ದ್ವೈತ ಧರ್ಮವು ದೃಢವಾಗಿ ಹೊಂದಿದ್ದ ದಾಸತ್ವಮನೋಭಾವದ ಫಲವಾಗಿ ಹರಿದಾಸ ಸಾಹಿತ್ಯವು ವಿಫುಲವಾಗಿ ಕರ್ನಾಟಕದಲ್ಲಿ ಬೆಳೆದು ಬರಲು ಸಾಧ್ಯವಾಯಿತು. ಈ ಮೂರು (ಅದ್ವೈತ, ವಿಶಿಷ್ಟಾದ್ವೈತ ಮತ್ತು ದ್ವೈತ) ಪಂಥಗಳು ಸಂಪೂರ್ಣವಾಗಿ ಪ್ರಾಚೀನ ಧಾರ್ಮಿಕ ಗ್ರಂಥಗಳಾದ ವೇದ, ಉಪನಿಷತ್ತು, ಅರಣ್ಯಕ, ಬ್ರಾಹ್ಮಣ, ರಾಮಾಯಣ, ಮಹಾಭಾರತ (ಭಗವದ್ಗೀತೆ) ಮುಂತಾದವುಗಳ ಅಧ್ಯಾತ್ಮಿಕ ಬೆಳವಣಿಗೆಗೆ ಅಧ್ಯಯನದ ಪ್ರತಿರೂಪಗಳೇ ಆಗಿ ಪ್ರತಿಪಾದಿತವಾಗಿದ್ದು ಹಿಂದೂ ಧರ್ಮದ ಅಧ್ಯಾತ್ಮಿಕ ದಾರಿದೀಪಗಳಾಗಿವೆ.

ಕರ್ನಾಟಕದಲ್ಲಿ ಕ್ರಿ.ಶ. ೧೨ನೇ ಶತಮಾನದಲ್ಲಿ ಜಗಜ್ಯೋತಿ ಬಸವಣ್ಣನವರು ಪ್ರತಿಪಾದಿಸಿದ ವೀರಶೈವ (ಶಕ್ತಿ ವಿಶಿಷ್ಟಾದ್ವೈತ) ಧರ್ಮವು ಹಿಂದೂ ಧರ್ಮದಲ್ಲಿ ಅಡಕವಾಗಿದ್ದ ಸತ್ವಸಾರಗಳನ್ನು ಸ್ಥಳೀಯ ಹಾಗೂ ಸರಳವಾದ ಕನ್ನಡ ಭಾಷೆಯಲ್ಲಿ ಬೋಧಿಸಿದ ಕಾರಣ ಜನಪ್ರಿಯವಾಯಿತು. ವೀರಶೈವ ಧರ್ಮವು ಸಾಮಾಜಿಕ ಜೀವನಕ್ಕೆ ಅವಶ್ಯಕವಾದ ನೀತಿ ಬೋಧನೆಗಳಿಂದ ಕೂಡಿದ್ದು, ಆಧ್ಯಾತ್ಮಿಕ ವಿಚಾರಗಳು ಸಂಸ್ಕೃತ ಭಾಷೆಗೆ ಬದಲಾಗಿ ಸರಳ ಕನ್ನಡ ಭಾಷೆಯಲ್ಲಿದ್ದು, ಕರ್ನಾಟಕದಲ್ಲಿ ಮಾತ್ರವಲ್ಲದೇ ಭಾರತದ ಇತರೆ ಪ್ರದೇಶಗಳಿಗೂ ಪಸರಿಸಿತು. ಈ ಧರ್ಮದಲ್ಲಿ ಬೆಳೆದು ಬಂದ ವಚನ ಸಾಹಿತ್ಯವು ಕನ್ನಡ ಭಾಷೆ ಮತ್ತು ಸಾಹಿತ್ಯದ ಧೀರೋದಾತ್ತ ಅಭಿವೃದ್ಧಿಗೆ ಕಾರಣವಾಯಿತೆಂಬುದು ಹಲವಾರು ವಿದ್ವಾಂಸರ ಅಭಿಪ್ರಾಯವಾಗಿದೆ.

**ಶೈವ ಪಂಥ :** ಶಿವನನ್ನು ನಾನಾ ರೂಪದಲ್ಲಿ ಆರಾಧಿಸಲಾಗುತ್ತಾದರೂ ಶಿವಲಿಂಗಾರಾಧನೆ ಅತ್ಯಂತ ಪ್ರಾಚೀನ ಪದ್ಧತಿಯಾಗಿದ್ದು, ಸಿಂಧೂ ಕಣಿವೆಯಲ್ಲೂ ಪಳಿಯುಳಿಕೆಗಳು

ಲಭಿಸಿವೆ. ತಾಲೂಕಿನ, ವರುಣ, ವಾಜಮಂಗಲ, ಮೈಸೂರು, ಚಾಮುಂಡಿಬೆಟ್ಟ ಮುಂತಾದವು ಪ್ರಮುಖ ಶೈವ ಕ್ಷೇತ್ರಗಳಾಗಿವೆ. ಮೈಸೂರು ನಗರದಲ್ಲಿ ಶಂಕರಮಠವಿದೆ.

**ಶ್ರೀವೈಷ್ಣವ ಪಂಥ :** ಶ್ರೀವೈಷ್ಣವ ಪಂಥದ ಪ್ರಚಾರಕರಾದ ರಾಮಾನುಜಾಚಾರ್ಯರ ಕಾರ್ಯಕ್ಷೇತ್ರ ನೆರೆಯ ಮಂಡ್ಯ ಜಿಲ್ಲೆಯ ಮೇಲುಕೋಟೆಯಾಗಿದೆ. ವಿಜಯನಗರ ಹಾಗೂ ಮೈಸೂರು ಅರಸರು ಶ್ರೀವೈಷ್ಣವ ಮತಕ್ಕೆ ಹೆಚ್ಚಿನ ಪ್ರೋತ್ಸಾಹ ನೀಡಿದುದರಿಂದ ಮೇಲುಕೋಟೆ, ಮಂಡ್ಯ, ಮೈಸೂರು ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಈ ಮತದ ಅನುಯಾಯಿಗಳು ಹೆಚ್ಚಿನ ಸಂಖ್ಯೆಯಲ್ಲಿ ನೆಲೆ ನಿಲ್ಲುವಂತಾಯಿತು. ಶ್ರೀವೈಷ್ಣವರಲ್ಲಿ ಮಂಡಯಂ, ಹೆಬ್ಬಾರ್, ಕೀಳ್ನಾಟ್, ಹೆಮ್ಮಿಗೆ, ಮರದೂರ್, ಶ್ರೀಚೋಳೀಯ, ಆಂಧ್ರಶ್ರೀ ವೈಷ್ಣವ ಮೊದಲಾದ ಪಂಗಡಗಳಿವೆ. ವಿಷ್ಣು ಪಾರಮ್ಯವನ್ನು ಒಪ್ಪಿಕೊಂಡು ಶ್ರೀ ವೈಷ್ಣವ ಲಾಂಛನವನ್ನು (ತ್ರಿಪುಂಡ್ರನಾಮ) ಧರಿಸಿ, ಮತೀಯ ಆಚರಣೆಗಳನ್ನು ಇವರು ಅನುಸರಿಸುತ್ತಾರೆ. ಸಮಾಜದ ಅನೇಕ ಜಾತಿಗಳು ಶ್ರೀವೈಷ್ಣವ ಧರ್ಮದಿಂದ ಹೊರಗಿದ್ದರೂ ಶ್ರೀವೈಷ್ಣವ ಸಂಪ್ರದಾಯವನ್ನು ಅನುಸರಿಸುತ್ತಿರುವುದನ್ನು ಈಗಲೂ ಕಾಣಬಹುದು. ಕ್ಷೌರಿಕ, ದೇವಾಂಗ, ಮಡಿವಾಳ, ಒಕ್ಕಲಿಗ, ಈಡಿಗ ಮುಂತಾದ ಜಾತಿ ವರ್ಗದವರನ್ನು ಇಲ್ಲಿ ಉದಾಹರಿಸಬಹುದು. ಮೈಸೂರು ತಾಲೂಕಿನಲ್ಲೂ ಶ್ರೀವೈಷ್ಣವ ಮಠಗಳಿದ್ದು ವೈಷ್ಣವರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ.

**ಶ್ರೀ ಪರಕಾಲಮಠ :** ಮೈಸೂರು ನಗರದಲ್ಲಿರುವ (ಜಗನ್ಮೋಹನ ಅರಮನೆಯ ಉತ್ತರ ಭಾಗದಲ್ಲಿರುವ ಭವ್ಯಮಂದಿರ) ಶ್ರೀ ಪರಕಾಲ ಮಠವೇ ದಕ್ಷಿಣ ಭಾರತದಲ್ಲಿನ ಅತ್ಯಂತ ಪುರಾತನ ಶ್ರೀವೈಷ್ಣವ ಮಠವೆಂದು ತಿಳಿದುಬರುತ್ತದೆ. ಇದರ ಮೂಲ ಪೀಠ ಬ್ರಹ್ಮತಂತ್ರ ಸ್ವತಂತ್ರ ತೇವಾರರವರಿಂದ ಕಂಚಿಯಲ್ಲಿ ಪ್ರತಿಷ್ಠಾಪಿಸಲ್ಪಟ್ಟಿತು. ಆನಂತರ ತಿರುಪತಿ, ಮೇಲುಕೋಟೆ, ಶ್ರೀರಂಗಪಟ್ಟಣ, ತದನಂತರ ಮೈಸೂರಿನಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ (೧೭೯೯ರಲ್ಲಿ) ಸ್ಥಾಪಿಸಲ್ಪಟ್ಟಿತು. ಈ ಪೀಠ ಯದುರಾಯರ ಕಾಲದಿಂದಲೂ ಸಹ ರಾಜಗುರು ಪೀಠವಾಗಿದೆ. 'ಸ್ವತಂತ್ರ' ಎಂಬುದು ಶ್ರೀ ವೇದಾಂತ ದೇಶಿಕರ ಬಿರುದು. ಅವರೇ ಈ ಮಠದ ಸ್ಥಾಪಕರಾದ ತಮ್ಮ ಶಿಷ್ಯರಿಗೆ ಬ್ರಹ್ಮತಂತ್ರ ಸ್ವತಂತ್ರರೆಂಬ ಬಿರುದನ್ನು ನೀಡಿದರು. ಮೈಸೂರಿನ ರಮಾವಿಲಾಸ ಅಗ್ರಹಾರ ರಸ್ತೆಯಲ್ಲಿರುವ ಅಹೋಬಲಮಠವೂ ಇದೇ ಪಂಥಕ್ಕೆ ಸೇರಿದೆ. ಇದು ಮೈಸೂರಿನಲ್ಲಿ ಸುಮಾರು ೨೫೦ ವರ್ಷಗಳ ಹಿಂದೆ ಸ್ಥಾಪಿಸಲ್ಪಟ್ಟಿತ್ತೆಂಬ ಪ್ರತೀತಿ ಇದೆ.

**ವೈಷ್ಣವ ಪಂಥ :** ಮಧ್ವಾಚಾರ್ಯರು ಉಡುಪಿ ಬಳಿಯಿರುವ ಪಾಜಕದಲ್ಲಿ ಮಧ್ಯಗೇಹಭಟ್ಟ, ವೇದಾವತಿ ದಂಪತಿಗಳ ಪುತ್ರರಾಗಿ ೧೨೩೮ ರಂದು ಜನಿಸಿದರು. ಮಧ್ವರ ಪ್ರಕಾರ ವಿಷ್ಣುವಿನ ಪೂಜೆಯೇ ಮುಖ್ಯ ಮತ್ತು ಅವನೇ ಸರ್ವೋಚ್ಚ. ಅವರು ಪಂಚಭೇದ ಸೂತ್ರವನ್ನು ಸೈದ್ಧಾಂತಿಕವಾಗಿ ರೂಪಿಸಿದರು. ಎಲ್ಲ ಜೀವಿಗಳಿಗೂ ದೇವರಿಗೂ ಇರುವ ಭಿನ್ನತೆ ಹಾಗೂ ಅಂತರಗಳನ್ನು ಈ ಪ್ರಭೇದಗಳ ಅನುಸಾರವಾಗಿ ಒಪ್ಪಿಕೊಂಡಿರುವುದರಿಂದ, ಅವರು ಉಪದೇಶಿಸಿದ ಈ ತತ್ವವೇ ದ್ವೈತ ಸಿದ್ಧಾಂತವೆಂದು

ಪ್ರಸಿದ್ಧವಾಗಿದೆ. ಪ್ರತಿಯೊಬ್ಬರೂ ಶ್ರದ್ಧಾಭಕ್ತಿಗಳ ಮಾರ್ಗಾನುಸರಣೆ ಮಾಡಿ ತಮ್ಮ ತಮ್ಮ ಆತ್ಮೋನ್ನತಿಯನ್ನು ಸಾಧಿಸಬೇಕೆಂಬುದೇ ಅವರ ಉಪದೇಶ ಸಾರ. ಮೈಸೂರು ನಗರ ಹಾಗೂ ತಾಲೂಕುಗಳಲ್ಲಿ ಮಧ್ವ ಸಂಪ್ರದಾಯದ ಹಲವಾರು ಮಠಗಳಿವೆ.

**ಉತ್ತರಾದಿ ಮಠ :** ಮೈಸೂರಿನ ಕೋಟೆಮೊಹಲ್ಲಾದಲ್ಲಿ ಉತ್ತರಾಧಿ ಮಠವಿದೆ ಈ ಮಠದ ಮಧ್ಯೆ ಇರುವ ಗುಡಿಯಲ್ಲಿ ಶ್ವೇತ ಶಿಲೆಯ ಆಂಜನೇಯ ಮೂರ್ತಿ ಇದೆ. ಈ ಮಠ ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಸ್ಥಾಪಿಸಲ್ಪಟ್ಟಿತು. ಮಠಕ್ಕೆ ಹಿರೋಡೆ ಅಥವಾ ಫ್ರೆಂಚ್ ರಾಕ್ಸ್ (ಈಗಿನ ಪಾಂಡವಪುರ) ತಾಲೂಕಿನ ಬೇವಿನಕುಪ್ಪೆಯ ಹತ್ತಿರ ಜಮೀನನ್ನು ದತ್ತಿ ಬಿಟ್ಟಿದ್ದಾರೆ. ಈ ಮಠದ ಹಿಂಬದಿಯಲ್ಲಿರುವ ಅಂಗಳದಲ್ಲಿ ಮಧ್ವಾಚಾರ್ಯರ ವಿಗ್ರಹವಿದೆ. ದ್ವೈತ ಸಿದ್ಧಾಂತದಲ್ಲಿ ಪಾಂಡಿತ್ಯ ಹೊಂದಿದ್ದ ಶ್ರೀ ಸತ್ಯಸಂಕಲ್ಪತೀರ್ಥ ಹಾಗೂ ಶ್ರೀ ಸತ್ಯಸಂಕಷ್ಟತೀರ್ಥರ ಎರಡು ಬೃಂದಾವನಗಳು ಉತ್ತರಾಧಿ ಮಠದ ಅಂಗಳದಲ್ಲಿ ನಿರ್ಮಿಸಲ್ಪಟ್ಟಿವೆ.

**ವೀರಶೈವ :** ಮೂಲತಃ ಈ ಧರ್ಮವು ರೇವಣಾರಾಧ್ಯ, ಮರುಳಾರಾಧ್ಯ, ಏಕೋರಾಮ, ಪಂಡಿತಾರಾಧ್ಯ ಹಾಗೂ ವಿಶ್ವೇಶ್ವರಾಧ್ಯ ಎಂಬ ಪಂಚಾಚಾರ್ಯರಿಂದ ಪ್ರಚಾರಗೊಂಡಿತು. ಅವರು ರಂಭಾಪುರಿ, ಉಜ್ಜಯಿನಿ, ಕೇದಾರ, ಶ್ರೀಶೈಲ ಹಾಗೂ ಕಾಶಿಗಳಲ್ಲಿ ಮಠಗಳನ್ನು ಸ್ಥಾಪಿಸಿದರೆಂಬ ಪ್ರತೀತಿ. ಬಸವಣ್ಣ ಅದಕ್ಕೆ ತಾತ್ವಿಕ ರೂಪಕೊಟ್ಟರು. ಇದರಲ್ಲಿ ಇಷ್ಟಲಿಂಗ ಪೂಜೆಗೆ ಆದ್ಯತೆ ಇದ್ದು, ಜಾತಿ, ಲಿಂಗ, ಭೇದವಿಲ್ಲದೆ ಎಲ್ಲರೂ ಇಷ್ಟಲಿಂಗ ಧರಿಸಬಹುದು. ಲಿಂಗ ದೀಕ್ಷೆ ಪಡೆದು ಲಿಂಗ ಧರಿಸುವುದರಿಂದ ಇದನ್ನು ಲಿಂಗಾಯಿತ ಧರ್ಮ ಎಂತಲೂ ಕರೆಯುವರು.

ವೀರಶೈವ ಧರ್ಮದ ಪ್ರಕಾರ ಜಗತ್ತಿನಲ್ಲಿ ಎಲ್ಲವೂ ಶಿವಮಯವಾದುದರಿಂದ ಇಲ್ಲಿ ಯಾವುದೂ ಮಾಯೆಯಲ್ಲ. ವೀರಶೈವದಲ್ಲಿ ಲಿಂಗ ಎಂದರೆ ಶಿವ, ಅಂಗ ಎಂದರೆ ಜೀವ. ಜೀವನು ಕ್ರಿಯಾಶೀಲನಾಗಿ ಆಸ್ಥೆಯಿಂದ ಶಿವನ ಲೀಲಾಕಾರ್ಯದಲ್ಲಿ ಭಾಗಿಯಾಗಿರಬೇಕು. ಸನ್ಯಾಸದ ಹೆಸರಿನಲ್ಲಿ ಸಾಮಾಜಿಕ ಹೊಣೆಗಾರಿಕೆಯನ್ನು ನಿರ್ಲಕ್ಷಿಸುವಂತಿಲ್ಲ. ಶಕ್ತಿಯಿಂದ ರೂಪಿತವಾದ ಈ ವಿಶ್ವದ ಕ್ರಿಯಾ ವಿಧಾನವನ್ನರಿತು ಕೊನೆಗೆ ಅದನ್ನು ಜಯಿಸಿ ನಿಲ್ಲಬೇಕು. ಮೈಸೂರು ತಾಲೂಕಿನ ಹೆಚ್ಚಿನ ಗ್ರಾಮಗಳಲ್ಲಿ ಸಾಮಾನ್ಯವಾಗಿ ಶಿವಾಲಯಗಳಿದ್ದು, ಶಾಸನ, ಸಾಹಿತ್ಯ ಕೃತಿಗಳಲ್ಲಿ ವೀರಶೈವ ಧರ್ಮದ ಉಲ್ಲೇಖಗಳಿರುವುದು ಈ ಪ್ರಾಂತದಲ್ಲಿ ವೀರಶೈವ ಅಥವಾ ಶಕ್ತಿ ವಿಶಿಷ್ಟಾದ್ವೈತ ಪಂಥ ಪ್ರಚಾರದಲ್ಲಿತ್ತೆಂಬುದನ್ನು ದೃಢಪಡಿಸುತ್ತದೆ.

**ಮಠಗಳು :** ಸುತ್ತೂರು ಮಠ, ಅನ್ನದಾನೇಶ್ವರ ಮಠ, ದಂಡಿಕೆರೆ ಮಠ, ಹೊಸಮಠ, ಇಂದುವಾಡಿ ಮಠ, ಜಪದಕಟ್ಟೆ ಮಠ, ಕುಂತೂರು ಮಠ, ಕುದೇರು ಮಠ, ಮಡಿವಾಳಸ್ವಾಮಿ ಮಠ, ನಮಃಶಿವಾಯ ಮಠ, ತಳ್ಳೂರು ಮಠ ಮುಂತಾದ ವೀರಶೈವ ಮಠಗಳು ಮೈಸೂರು ನಗರದಲ್ಲಿವೆ. ಬನ್ನದಪುರದ ಮಠ, ಸಟ್ಯಾನಾಯಕನ ಹಳ್ಳಿಮಠ

ಮುಂತಾದವು ಮೈಸೂರು ತಾಲೂಕಿನಲ್ಲಿವೆ. ನಾಗಲಿಂಗಸ್ವಾಮಿ ಮಠ (೧೯೨೩), ರಾಘವೇಂದ್ರ, ವ್ಯಾಸರಾಜಮಠ, ರಾಮಕೃಷ್ಣಾಶ್ರಮ (೧೯೨೫) ಮುಂತಾದ ಆಶ್ರಮಗಳೂ ಗುರು ಮಠಗಳೂ ಇವೆ.

**ಜೈನಧರ್ಮ :** ಪ್ರಾಚೀನ ಪ್ರಮುಖ ಧರ್ಮಗಳಲ್ಲಿ ಒಂದಾದ ಜೈನಧರ್ಮಕ್ಕೆ ಕರ್ನಾಟಕದಲ್ಲಿ ತಲಕಾಡಿನ ಗಂಗ ದೊರೆಗಳಿಂದ ರಾಜಾಶ್ರಯ ದೊರೆತಿದ್ದರಿಂದ ಅವರ ಅಧೀನಕ್ಕೊಳಪಟ್ಟ ಪ್ರದೇಶದಲ್ಲಿ ವ್ಯಾಪಕವಾಗಿ ಅದು ಪಸರಿಸಿತು. ಪ್ರಾರಂಭದಲ್ಲಿ ರಾಜಮಹಾರಾಜರು ಈ ಧರ್ಮದ ಪ್ರಭಾವಕ್ಕೊಳಗಾಗಿ ಇದನ್ನು ಸ್ವಧರ್ಮವಾಗಿ ಸ್ವೀಕರಿಸಿದರು. ಕೆಲವು ಜನಪದ ವರ್ಗದವರಿಗೂ ಈ ಧರ್ಮ ಅಪೇಕ್ಷಣೀಯವೆನಿಸಿದ್ದರಿಂದ ಮತಾಂತರ ಹೊಂದಿದರೂ ಆನಂತರ ಇಲ್ಲಿನ ವ್ರತಾನುಚರಣೆಗಳು ಕಷ್ಟ ಸಾಧ್ಯವೆನಿಸಿ ಈ ಧರ್ಮದ ಪ್ರಾಬಲ್ಯ ಕಡಿಮೆಯಾದ ಆನಂತರ ಮೂಲಧರ್ಮಕ್ಕೆ ಹಿಂದಿರುಗಿದರು. ತಾಲೂಕಿನ ಕೆಲವು ಒಕ್ಕಲಿಗರ ಮನೆಗಳಲ್ಲಿ ಪಿತೃಪಕ್ಷದ ಕಾಲದಲ್ಲಿ ಜೈನೆಡೆ ಇಡುವುದು ಈ ಅನಿಸಿಕೆಯನ್ನು ಸಮರ್ಥಿಸುತ್ತದೆ.

ಮೈಸೂರು ನಗರ ಹಾಗೂ ತಾಲೂಕಿನ ಅನೇಕ ಭಾಗಗಳಲ್ಲಿ ಹಿಂದೆ ಹಲವಾರು ಬಸದಿಗಳು ಇದ್ದದ್ದು ಶಾಸನ ಹಾಗೂ ಸಾಹಿತ್ಯಾಧಾರಗಳಿಂದ ತಿಳಿಯುತ್ತದೆ. ದಕ್ಷಿಣ ಭಾರತದಲ್ಲಿ ಪುನ್ನಾಟವು ಜೈನಧರ್ಮದ ಮುಖ್ಯ ಕೇಂದ್ರವಾಗಿ ಪ್ರಸಿದ್ಧವಾಗಿತ್ತು. ಪುನ್ನಾಟ ಪ್ರದೇಶದಲ್ಲಿ ಪ್ರಚಲಿತವಾಗಿದ್ದ ಜೈನ ಸಂಘವನ್ನು ರಾಜಧಾನಿ ಕಿತ್ತೂರಿನ ಹೆಸರಿನಲ್ಲಿ ಕಿತ್ತೂರ ಸಂಘ ಎಂದು ಕರೆಯಲಾಗಿತ್ತು. ಜಿನಸೇನಾಚಾರ್ಯರು ತಮ್ಮ ಹರಿವಂಶದಲ್ಲಿ ಬೃಹತ್‌ಗಣ ಇಲ್ಲವೇ ಪುನ್ನಾಟ ಸಂಘದ ಹೆಸರನ್ನು ಉಲ್ಲೇಖಿಸಿದ್ದಾರೆ.

ಮೈಸೂರು ನಗರದ ಅಶೋಕ ರಸ್ತೆಯ ದೊಡ್ಡ ಗಡಿಯಾರದ ಬಳಿ ಪಾರ್ಶ್ವನಾಥ ಜೈನಬಸದಿ ಇದೆ. ಇದು ಸ್ಥಳೀಯ ವ್ಯಾಪಾರಿಗಳಿಂದ ಈಚೆಗೆ ನಿರ್ಮಿಸಲ್ಪಟ್ಟಿದೆ. ಗೋಪುರ ಶಿಖರಗಳು ಒಂದಕ್ಕೊಂದು ಹತ್ತಿರದಲ್ಲಿದ್ದು ಬೇರೆ ಗೋಪುರಗಳ ನಮೂನೆಯಂತಿರದೇ ಇಡೀ ನಗರ ಹಾಗೂ ತಾಲೂಕಿನಲ್ಲೆ ಈ ಮಾದರಿಯ ಶಿಖರ ಇದೊಂದೇ ಎನ್ನಬಹುದು. ಈ ಕಟ್ಟಡ ಹಾಗೂ ಖಾಲಿ ನಿವೇಶನವನ್ನು ದಿವಂಗತ ಎಂ.ಎಲ್. ವರ್ಧಮಾನಯ್ಯನವರಿಂದ ೧೯೦೯ರಲ್ಲಿ ದಾನವಾಗಿ ಪಡೆಯಲಾಗಿದೆ. ನಗರದ ಇತರೆಡೆಯಲ್ಲೂ ಜೈನಮಂದಿರಗಳಿವೆ.

**ಇಸ್ಲಾಂ ಧರ್ಮ :** ಮಲಿಕ್ ಖಾಫರನ ದಂಡಯಾತ್ರೆ (೧೩೧೦) ಹಾಗೂ ಬಹಮನೀ ಸಾಮ್ರಾಜ್ಯದ ಸ್ಥಾಪನೆಯೊಡನೆ ಈ ಧರ್ಮ ದಕ್ಷಿಣದಲ್ಲಿ ತ್ವರಿತವಾಗಿ ಹರಡಲಾರಂಭಿಸಿತು. ಮೊದ ಮೊದಲು ಇಲ್ಲಿ ನೆಲೆಸಿದ ಇಸ್ಲಾಮೀಯರು ಉತ್ತರ ಭಾರತದಿಂದ ಬಂದವರಾದರೂ ಅವರ ಅಧಿಕಾರ ದಕ್ಷಿಣದಲ್ಲಿ ನೆಲೆಯೂರಿದ ಮೇಲೆ ಉತ್ತರದವರೊಡನೆ ಅವರ ರಾಜಕೀಯ ಸಂಬಂಧಗಳೂ ಸುಗಮವಾಗಿ ಉಳಿಯಲಿಲ್ಲ. ಬಹಮನೀ ರಾಜ್ಯ ಒಡೆದ ಮೇಲೆ ಹುಟ್ಟಿದ ಬರೀದ್ ಶಾಹೀ, ಆದಿಲ್ ಶಾಹೀ, ಕುತ್ಬ್‌ಶಾಹೀ ರಾಜ್ಯಗಳ

ಒಡೆತನದ ಕಾಲದಲ್ಲಿ ಹಾಗೂ ಔರಂಗಜೇಬನ ಕಾಲದಲ್ಲಿ ಮುಂದೆ ಹೈದರ್ ಅಲಿ, ಟಿಪ್ಪು ಸುಲ್ತಾನ್ ಇವರುಗಳ ಕಾಲದಲ್ಲಿ ಇಸ್ಲಾಂಧರ್ಮ ವಿಶೇಷವಾಗಿ ಪ್ರೋತ್ಸಾಹ ಪಡೆದು, ಅದರ ಅನುಯಾಯಿಗಳ ಸಂಖ್ಯೆ ದಿನೇ ದಿನೇ ವರ್ಧಿಸಿತು. ಅಂತೆಯೇ ಮೈಸೂರು ಪ್ರಾಂತಕ್ಕೂ ಮುಸ್ಲಿಮರ ಪಾದಾರ್ಪಣೆಯಾಯಿತೆನ್ನಬಹುದು.

ಮೈಸೂರು ನಗರ ಹಾಗೂ ತಾಲೂಕಿನ ಕೆಲವು ಗ್ರಾಮಗಳಲ್ಲಿ ಮುಸ್ಲಿಮರಿದ್ದು ನಗರ ಹಾಗೂ ತಾಲೂಕುಗಳಲ್ಲಿ ಅನೇಕ ಮಸೀದಿಗಳಿದ್ದು ಪ್ರಾರ್ಥನಾ ಮಂದಿರಗಳನ್ನು ಒಳಗೊಂಡಿವೆ. ನಗರದ ಇರ್ವಿನ್ ರಸ್ತೆಯಲ್ಲಿರುವ ದೊಡ್ಡ ಮಸೀದಿ, ದೊಡ್ಡ ಪೇಟೆಯಲ್ಲಿರುವ ಕಚ್ಚಿ ಮೇಮನ್ ಮಸೀದಿ, ಅಶೋಕ ರಸ್ತೆಯ ದೊಡ್ಡ ಗಡಿಯಾರದ ಹತ್ತಿರವಿರುವ ಖಾಕಿಷ ಮಸೀದಿ, ತಿಲಕ್ ನಗರದಲ್ಲಿರುವ ಈದ್ಗಾ ಮೈದಾನ, ದೊಡ್ಡಪೇಟೆಯಲ್ಲಿರುವ ಮಸಜಿದ್ ಎ ಆಜಂ, ಶಿವರಾಮಪೇಟೆಯಲ್ಲಿರುವ ಹಾಲ್ವೆಮೆಮನ್ ಮಸೀದಿ, ನೂರಡಿ ರಸ್ತೆಯಲ್ಲಿರುವ ಮಿರ್‌ಮಹಮ್ಮದ್ ಮಸೀದಿ ಮುಂತಾದವು ಉಲ್ಲೇಖಾರ್ಹ. ನೂರು ವರ್ಷಕ್ಕೂ ಹಳೆಯದಾದ ಮಸ್ಜೀದ್–ಎ–ಆಜಮ್ ಮಂಡಿ ಮೊಹಲ್ಲಾದಲ್ಲಿದೆ. ಇಂಡೊ–ಇಸ್ಲಾಮಿಕ್ ವಾಸ್ತುಶೈಲಿಯಲ್ಲಿ ಇದು ರಚನೆಯಾಗಿದೆ. ಅಲ್ಲದೆ ಮುಸ್ಲಿಂ ಸಂತರ ಅನೇಕ ದರ್ಗಾಗಳೂ ಇವೆ.

**ಕ್ರೈಸ್ತ ಧರ್ಮ :** ಕ್ರೈಸ್ತ ಧರ್ಮದ ಸ್ಪಷ್ಟ ಗುರುತು ಕರ್ನಾಟಕದಲ್ಲಿ ಕಾಣಿಸಿಕೊಳ್ಳುವುದು ಪೋರ್ಚುಗೀಸರು ಭಾರತಕ್ಕೆ ಬಂದ ನಂತರವೇ. ೧೬ನೆಯ ಶತಮಾನದ ಆದಿಯಿಂದ ರೋಮನ್ ಕ್ಯಾಥೋಲಿಕ್ ಪಂಥದವರೂ ೧೯ನೆಯ ಶತಮಾನದ ಪ್ರಾರಂಭದಲ್ಲಿ ಪ್ರಾಟಿಸ್ಟೆಂಟರ ವಿವಿಧ ಪಂಥಗಳವರೂ ಕರ್ನಾಟಕದಲ್ಲಿ ಕ್ರೈಸ್ತ ಧರ್ಮವನ್ನು ವ್ಯವಸ್ಥಿತವಾಗಿ ಸ್ಥಾಪಿಸಿದರು. ಇದಕ್ಕೂ ಹಿಂದೆಯೇ ಕ್ರೈಸ್ತ ಧರ್ಮ ಕರ್ನಾಟಕದಲ್ಲಿ ಇತ್ತು ಎಂಬುದಕ್ಕೆ ಕೆಲವು ಸಾಕ್ಷ್ಯಾಧಾರಗಳು ದೊರೆತಿವೆ. ಕ್ರಿಸ್ತನ ಹನ್ನೆರಡು ಸ್ವಂತ ಶಿಷ್ಯರಲ್ಲಿ ಒಬ್ಬನಾದ ಸೇಂಟ್ ಥಾಮಸ್ ಸುಮಾರು ಕ್ರಿ.ಶ. ೫೨ರಲ್ಲಿ ಗುಡ್ನಾಫಾರ್ ಎಂಬ ರಾಜನ ಆಮಂತ್ರಣದ ಮೇರೆಗೆ ಭಾರತಕ್ಕೆ ಬಂದನೆಂದೂ ಮಜಾಯ್ ಎಂಬುವನ ರಾಜ್ಯದಲ್ಲಿಯೂ ಮತ ಪ್ರಚಾರ ಮಾಡಿದನೆಂದೂ ಮೂರನೆಯ ಶತಮಾನದ ಸಿಲಿಯನ್ ಭಾಷೆಯ ಆ್ಯಕ್ಟ್ಸ್ ಆಫ್ ಸೇಂಟ್ ಥಾಮಸ್‌ನಲ್ಲಿ ಉಲ್ಲೇಖಿಸಿದೆ. ಗುಡ್ನಾಫಾರ್ ಎಂದರೆ ಮೈಸೂರಿನ ಕುಟ್ನಾಫ್ವಾರ್ ಅಥವಾ ಕಂದಪ್ಪ ರಾಜನಿರಬಹುದು ಎಂದು ಕೆಲವು ವಿದ್ವಾಂಸರ ಅಭಿಪ್ರಾಯ. ಮಜ್ದಾಯ್ ರಾಜ ಕೇರಳ ಅಥವಾ ಕೋರಮಂಡಲ್ ಅಥವಾ ಮೈಸೂರಿನವನು ಇರಬಹುದೆಂದು ಇನ್ನೂ ಕೆಲವರು ಅಭಿಪ್ರಾಯಪಟ್ಟಿದ್ದಾರೆ.

ಮುಂಬಯಿ ಹತ್ತಿರದ ಕಲ್ಯಾಣ, ಠಾಣಾಗಳಲ್ಲಿ ಮತ ಪ್ರಚಾರ ಮಾಡುತ್ತಿದ್ದ ಫ್ರಾಯರ್ ಜೋಡಾನಸ್ ೧೩೨೪ರಲ್ಲಿ ತನ್ನ ಸಹ ಧರ್ಮೋಪದೇಶಕರಿಗೆ ಸಲ್ಲಿಸಿದ ಮನವಿಯ ಫಲವಾಗಿ ಐದು ಮಂದಿ ಡೊಮಿನಿಕನ್ ಸನ್ಯಾಸಿಗಳು ಕೆನರಾ ಹಾಗೂ ಮೈಸೂರು ಪ್ರದೇಶಗಳಿಗೆ ಧರ್ಮ ಪ್ರಚಾರಕ್ಕಾಗಿ ಬಂದರು. ೧೫೧೦ರಲ್ಲಿ ಗೋವೆ ಪೋರ್ಚುಗೀಸರ ವಶವಾದ ಮೇಲೆ ಅಲ್ಲಿ ಅನೇಕರು ಮತಾಂತರಗೊಂಡರು. ೧೬೮೫ರಲ್ಲಿ

ಮರಾಠರು ಗೋವೆಯನ್ನು ಆಕ್ರಮಿಸಿದಾಗಲೂ ಕ್ರೈಸ್ತರು ಕರಾವಳಿ ಜಿಲ್ಲೆಗಳನ್ನು ಪ್ರವೇಶಿದರು.

೧೫೮೭ರಲ್ಲಿ ಮೈಸೂರು ಪ್ರದೇಶದಲ್ಲಿ ಫ್ರಾನ್ಸಿಸ್ಕನರು ಸುವಾರ್ತೆಗಳನ್ನು ಪ್ರಚಾರ ಮಾಡಿದರು. ರಣಧೀರ ಕಂಠೀರವ ನರಸರಾಜ ಒಡೆಯರ ಕಾಲದಲ್ಲಿ ರಾಜನ ಸಹಾನುಭೂತಿಯನ್ನೂ ಗೌರವವನ್ನೂ ಸಂಪಾದಿಸಿದ್ದ ಗೋವೆಯ ಜೆಸ್ವಿಟ್ ಸನ್ಯಾಸಿ ಲಿಯೊನಾರ್ಡೊ ಸಿನ್ನಾಮಿ ಮೈಸೂರಿನಲ್ಲಿ ವ್ಯವಸ್ಥಿತ ಧರ್ಮಬೋಧನೆಯನ್ನು ಆರಂಭಿಸಿದ. ೧೬೪೮ರಲ್ಲಿ ಶ್ರೀರಂಗಪಟ್ಟಣವನ್ನು ತಲುಪುವ ಮೊದಲು ಕರಾವಳಿ ಜಿಲ್ಲೆಗಳಲ್ಲಿ ಇವನ ದುಡಿಮೆ ನಿರೀಕ್ಷಿಸಿದ ಫಲವನ್ನು ಕೊಡಲಿಲ್ಲವಂತೆ. ಭಾರತೀಯ ಸನ್ಯಾಸಿಯಂತೆ ವೇಷಭೂಷಣಗಳನ್ನು ಧರಿಸಿ ಕ್ರೈಸ್ತ ಧರ್ಮವನ್ನು ಸತ್ಯವೇದವೆಂಬ ಹೆಸರಿನಲ್ಲಿ ಪ್ರಚಾರ ಮಾಡಿದ. ಬಸವಪುರ, ರಾಮಪುರ ಹಾಗೂ ಶ್ರೀರಂಗಪಟ್ಟಣದಲ್ಲಿ ಹೆಚ್ಚಾಗಿ ಬ್ರಾಹ್ಮಣರು, ಸೋನೆಗಾರರು, ಒಕ್ಕಲು ಮಕ್ಕಳು ಹೊಸಧರ್ಮವನ್ನು ಸ್ವೀಕರಿಸಿದರು. ಕೆಲವು ಆಸ್ಥಾನಾಧಿಕಾರಿಗಳು ಕ್ರೈಸ್ತರಾದರು.

ಮೈಸೂರು ಪ್ರದೇಶದಲ್ಲಿ ಕ್ರೈಸ್ತ ಧರ್ಮ ಬಹುಬೇಗನೆ ಹರಡಿತು. ೧೭೦೦ರ ಹೊತ್ತಿಗೆ ಹದಿನೆಂಟು ಮಂದಿ ಮಿಷನರಿಗಳೂ ೩೦,೦೦೦ ಮಂದಿ ಕ್ರೈಸ್ತರೂ ಇದ್ದರು. ಬಸವನಪುರ, ಕಾನಕಾನಹಳ್ಳಿ, ಹಾರುಬರೆ, ಕೆಲಮಂಗಳ ಇವು ಅಂದಿನ ಕೆಲವು ಮುಖ್ಯ ಕ್ರೈಸ್ತ ಧರ್ಮ ಕೇಂದ್ರಗಳಾದವು.

ಪೋರ್ಚುಗಲ್ ಆಧಿಪತ್ಯದಿಂದ ಜೆಸ್ವಿಟರನ್ನು ಬಹಿಷ್ಕರಿಸಿದ ನಂತರ ಮೈಸೂರಿಗೆ ಹೊಸತಾಗಿ ಬಂದ ಧರ್ಮೋಪದೇಶಕರು ಇಲ್ಲವೇ ಇಲ್ಲ ಎನ್ನಬೇಕು. ಆಗ ಇಲ್ಲಿ ದುಡಿಯುತ್ತಿದ್ದ ಹದಿಮೂರು ಜೆಸ್ವಿಟರು ಹಾಗೂ ಐವತ್ತೇಳು ಸಹಾಯಕರು ಮೈಸೂರಿನಲ್ಲಿಯೇ ಉಳಿದುಕೊಂಡರು. ಮೈಸೂರು ಪ್ರಾಂತವನ್ನು ಕಾರ್ಮೆಲೈಟ್ ಸಂಸ್ಥೆಯವರ ವಶಕ್ಕೆ ಪೋಪ್ ಒಪ್ಪಿಸಿದ. ಆದರೆ ಇವರು ಆಸಕ್ತಿ ವಹಿಸಿದ ಚಿಹ್ನೆಯೇನೂ ಕಾಣದು. ೧೮೦೦ರ ಬಳಿಕ ಮೈಸೂರಿನಲ್ಲಿದ್ದ ಸುಮಾರು ೨೫,೦೦೦ ಕ್ರೈಸ್ತರ ಸಂಖ್ಯೆ ಕಾರಣಾಂತರವಾಗಿ ಬಹಳ ಕ್ಷೀಣಿಸಿತು. ಕೆಲವರು ಸಣ್ಣಪುಟ್ಟ ಸೈನ್ಯಗಳನ್ನು ಸೇರಿ ತಮ್ಮ ಆಚಾರ, ಧರ್ಮವನ್ನು ಕಡೆಗಣಿಸಿದರು. ಇನ್ನೂ ಕೆಲವರು ಹೆಚ್ಚು ಧಾರ್ಮಿಕ ಸ್ವಾತಂತ್ರ ಮತ್ತು ರಕ್ಷಣೆ ಇರುವ ಮದರಾಸು ರಾಜ್ಯದಲ್ಲಿ ನೆಲೆಸಿದರು. ಪ್ಯಾರಿಸಿನ ಫ್ರೆಂಚ್ ಫಾರಿನ್ ಮಿಷನ್ ಸಂಸ್ಥೆಯವರ ಪುರೋಹಿತರು ಮೈಸೂರು ಪ್ರದೇಶದಲ್ಲಿ ಕ್ರೈಸ್ತ ಧರ್ಮವನ್ನು ರಕ್ಷಿಸಿ, ಊರ್ಜಿತಗೊಳಿಸಿ ಈಗಿರುವ ಸ್ಥಿತಿಗೆ ಕಾರಣರಾದರು.

ಕರ್ನಾಟಕದಲ್ಲಿ ಪ್ರಾಟೆಸ್ಟೆಂಟರು ಮತಪ್ರಚಾರ ಮಾಡಿದುದು ೧೮೦೦ ರ ಬಳಿಕ. ಕ್ರಿಶ್ಚಿಯನ್ ಫ್ರೆಡರಿಕ್ ಷ್ವಾರ್ಟ್ಜ್ ಎಂಬ ಡ್ಯಾನಿಶ್ ಲುತೆರನ್ ಮಿಷನರಿ ಮೈಸೂರಿನಲ್ಲಿ ಸುವಾರ್ತೆಗಳನ್ನು ಪ್ರಚಾರ ಮಾಡಿದ ಮೊದಲ ಪ್ರಾಟಿಸ್ಟೆಂಟ್ ಪಾದ್ರಿ. ಹೈದರ್ ಇವನನ್ನು ಬಹಳವಾಗಿ ಗೌರವಿಸುತ್ತಿದ್ದ. ಬಾಸೆಲ್ ಮಿಶನ್‌ರವರು ಹುಬ್ಬಳ್ಳಿ, ಬೆಟಗೇರಿ, ಗುಳೇದಗುಡ್ಡ,

ಮೈಸೂರು, ಕೋಲಾರ, ಬಿಜಾಪುರಗಳಲ್ಲಿ ಕಾರ್ಯನಿರತರಾದರು. ಹೆಚ್ಚಾಗಿ ನಿಮ್ನ ವರ್ಗದ ಜನತೆಗೆ ಕ್ರೈಸ್ತಧರ್ಮವನ್ನು ಇವರು ಬೋಧಿಸಿದರು. ಹ್ಯಾಂಡ್ಸನ್ ಮೊತ್ತ ಮೊದಲಿಗೆ ಬೈಬಲನ್ನು ಕನ್ನಡಕ್ಕೆ ಭಾಷಾಂತರ ಮಾಡಿದ.

೧೯ನೆಯ ಶತಮಾನದಿಂದೀಚೆಗೆ ಕ್ರೈಸ್ತ ಧರ್ಮದವರ ಚಟುವಟಿಕೆಗಳು ಧಾರ್ಮಿಕ ವಲಯವನ್ನು ಮೀರಿದುವು. ಈ ಅವಧಿಯಲ್ಲಿ ಹುಟ್ಟಿದ ಅನೇಕ ಕ್ರೈಸ್ತ ಸಂಸ್ಥೆಗಳು ಕ್ರೈಸ್ತೇತರರಿಗೆ ಪ್ರವೇಶಾವಕಾಶವನ್ನು ಕಲ್ಪಿಸಿಕೊಟ್ಟವು. ಮೈಸೂರು ನಗರದ ಕ್ಯಾಥೋಲಿಕ್ ಸೇಂಟ್ ಫೀಲೋಮಿನಾ ಚರ್ಚ್ (೧೯೩೮), ಬೆಂಗಳೂರು–ನೀಲಗಿರಿ ರಸ್ತೆಯಲ್ಲಿರುವ ಭಕ್ತ ರೋಮಿಯೋ ಚರ್ಚ್, ಚರ್ಚ್ ರಸ್ತೆಯಲ್ಲಿ ವೆಸ್ಲಿಯನ್ ಮಿಷನ್ ಪ್ರೆಸ್ಸಿನ ಪಕ್ಕದಲ್ಲಿರುವ ವೆಸ್ಲಿಯನ್ ಚರ್ಚ್ ಮುಂತಾದವು, ಇಲ್ಲಿ ಉಲ್ಲೇಖಿಸಬಹುದಾದ ಕೆಲವು ಚರ್ಚ್‌ಗಳಾಗಿವೆ.

**ಬೌದ್ಧ ಧರ್ಮ :** ಉತ್ತರ ಭಾರತದಲ್ಲಿ ಕ್ರಿ.ಪೂ. ೬ನೆಯ ಶತಮಾನದಲ್ಲಿ ಗೌತಮ ಬುದ್ಧನಿಂದ ಪ್ರಚಲಿತವಾದ ಬೌದ್ಧ ಧರ್ಮ ಮುಂದೆ ಬೆಳೆದ ತನ್ನ ಪಂಥೋಪಪಂಥಗಳೊಡನೆ ಕರ್ನಾಟಕದಲ್ಲೂ ಹಲವು ಕಾಲ ಪ್ರಚಲಿತವಾಗಿತ್ತು. ಶ್ರೀಲಂಕಾದ (ಸಿಂಹಳ) ಬೌದ್ಧ ಗ್ರಂಥಗಳಾದ ದೀಪವಂಶ ಹಾಗೂ ಮಹಾವಂಶ ಗ್ರಂಥಗಳಿಂದ ಮೌರ್ಯ ಚಕ್ರವರ್ತಿ ಅಶೋಕನ ಕಾಲದಲ್ಲಿ (ಕ್ರಿ.ಪೂ.೩ನೇ ಶತಮಾನ) ಬೌದ್ಧ ಧರ್ಮ ಕರ್ನಾಟಕಕ್ಕೆ ಹರಡಿತೆಂದು ತಿಳಿಯುತ್ತದೆ. ಅವುಗಳ ಪ್ರಕಾರ ಅಶೋಕ ಏರ್ಪಡಿಸಿದ್ದ ಬೌದ್ಧ ಮಹಾಸಭೆಯ ನಂತರ ಆ ಸಭೆಯ ಆಧ್ಯಕ್ಷತೆ ವಹಿಸಿದ್ದ ಮೊಗ್ಗಲಿಪುತ್ರ ತಿಸ್ಸ, ಧರ್ಮ ಪ್ರಸಾರಣೆಗಾಗಿ ಮಹಿಷಮಂಡಲಕ್ಕೆ ಮಹಾದೇವ ಹಾಗೂ ವನವಾಸಿಗೆ (ಬನವಾಸಿ) ರಕ್ಖಿತ ಎಂಬ ಭಿಕ್ಷುಗಳನ್ನು ಕಳುಹಿಸಿದ. ಮಹಾದೇವ ಮಹಿಷಮಂಡಲದಲ್ಲಿ ಬುದ್ಧ ಹೇಳಿದ ದೇವದೂತ ಉಪದೇಶವನ್ನು ಬೋಧಿಸಿದ. ಇದರಿಂದ ನಲವತ್ತು ಸಾವಿರ ಜನ ಬೌದ್ಧ ಧರ್ಮದ ಅನುಯಾಯಿಗಳಾದರಲ್ಲದೆ, ಸಾವಿರಾರು ಜನ ಬೌದ್ಧ ಭಿಕ್ಷುಗಳಾದರು. ಈ ಗ್ರಂಥಗಳಲ್ಲದೆ ಬೌದ್ಧ ಧರ್ಮದ ದಾಕ್ಷಿಣಾತ್ಯ ಹಾಗೂ ಔತ್ತರೇಯ ಸಂಪ್ರದಾಯಗಳಿಗೆ ಸೇರಿದ ಥೂಪವಂಶ, ಸದ್ಧಮ್ಮ ಸಂಗ್ರಹ, ಮಿಲಿಂದಪಳಿ, ಸಮಂತಚಾಸಾದಿಕ ಮೊದಲಾದ ಇತರ ಗ್ರಂಥಗಳಲ್ಲೂ ಈ ವಿಷಯದ ಉಲ್ಲೇಖಗಳು ದೊರಕುತ್ತವೆ.

ಬುದ್ಧನ ಮರಣಾನಂತರ ಮಹಾಯಾನ ಹಾಗೂ ಹೀನಯಾನ ಎಂಬ ಎರಡು ಪಂಥಗಳಲ್ಲೂ ಕೆಲವೊಂದು ಸೂಕ್ಷ್ಮ ತಾತ್ವಿಕ ವ್ಯತ್ಯಾಸಗಳಿಂದಾಗಿ ಹಲವು ಉಪಶಾಖೆಗಳು ಹುಟ್ಟಿಕೊಂಡಿದ್ದುವು. ಮಹಾರಾಷ್ಟ್ರ ಹಾಗೂ ಆಂಧ್ರ ಪ್ರದೇಶಗಳಲ್ಲಿ ಈ ಕಾಲದಲ್ಲಿ ಭದಾಯನೀಯ (ಭದ್ರಾಯನೀಯ) ಧಮ್ಮುತ್ತರೀಯ (ಧರ್ಮೋತ್ತರೀಯ), ಚೇತಕ (ಚೈತ್ಯಕ), ಅಪರಸೇಲೀಯ (ಅಪರಶೈಲೀಯ), ಪುಬ್ಬಸೇಲೀಯ (ಪೂರ್ವ ಶೈಲೀಯ), ಮಹೀಶಾಸಕ, ಬಹುಸ್ಸುತೀಯ (ಬಹುಶ್ರುತೀಯ) ಈ ಬೌದ್ಧ ಶಾಖೆಗಳಿದ್ದುವು. ಮಹೀಶಾಸಕ ಸಹ ಇದರ ಒಂದು ಶಾಖೆಯೇ. ನಳಿನಾಕ್ಷದತ್ತ ಎಂಬ ವಿದ್ವಾಂಸರ ಪ್ರಕಾರ ಬನವಾಸಿಯಲ್ಲಿ ಮಹೀಶಾಸಕ ಪಂಥ ಪ್ರಬಲವಾಗಿತ್ತು. ಮಹೀಶಾಸಕ ಶಾಖೆ

ಮಹೀಷ ದೇಶದ (ಮಹೀಷಮಂಡಲ) ಅಥವಾ ಅಲ್ಲಿ ಮೊದಲು ಬೌದ್ಧ ಧರ್ಮ ಪ್ರಸಾರ ಮಾಡಿದ ಮಹಾದೇವನ ಹೆಸರಿನ ಮೇಲೆ ಹುಟ್ಟಿರಬಹುದು ಎಂಬ ಊಹೆ ಇದೆ. ಚುಟುವಂಶದ ಒಬ್ಬ ರಾಣಿ ನಾಗಾರ್ಜುನ ಕೊಂಡದಲ್ಲಿ ಮಹೀಶಾಸಕರಿಗಾಗಿ ಒಂದು ವಿಹಾರವನ್ನು ಕಟ್ಟಿಸಿದಳು ಎಂದು ಅಲ್ಲಿಯ ಒಂದು ಶಾಸನ ತಿಳಿಸುತ್ತದೆ.

ಇತ್ತೀಚಿನ ದಿನಗಳಲ್ಲಿ ನಡೆದ ಬೌದ್ಧರ ಧಾರ್ಮಿಕ ಪ್ರಚಾರದಿಂದಾಗಿ ಮೈಸೂರು ಪ್ರದೇಶದಲ್ಲಿ ಕೆಲವೆಡೆ ಬೌದ್ಧ ಧರ್ಮಾನುಯಾಯಿಗಳು ಅಲ್ಪ ಸಂಖ್ಯೆಯಲ್ಲಿ ಅಲ್ಲಲ್ಲಿ ಕಾಣಿಸಿಕೊಳ್ಳುತ್ತಿರುವುದುಂಟು. ಮೈಸೂರಿನಲ್ಲಿರುವ ಮಹಾಬೋಧಿ ಸೊಸೈಟಿ ಎಂಬ ಸಂಸ್ಥೆ ಈಗ ಕೆಲಸ ಮಾಡುತ್ತಿದೆ. ಕಳೆದ ಶತಮಾನದ ಉತ್ತರಾರ್ಧ ಭಾಗದಲ್ಲಿ ಟಿಬೆಟ್ಟಿನಿಂದ ವಲಸೆ ಬಂದ ನಿರಾಶ್ರಿತರಿಗೆ ಜಿಲ್ಲೆಯ ಕೆಲವೆಡೆಗಳಲ್ಲಿ ನೆಲೆಯೊದಗಿಸಿರುವುದರಿಂದಲೂ, ಬೌದ್ದರು ಮೈಸೂರು ನಗರವನ್ನು ತಮ್ಮ ವ್ಯಾಪಾರದ ನೆಲೆಯನ್ನಾಗಿ ಮಾಡಿಕೊಂಡಿರುವುದರಿಂದಲೂ ಬೌದ್ಧ ಧರ್ಮ ಇಂದು ಮೈಸೂರಿನಲ್ಲೂ ಪ್ರಚಾರದಲ್ಲಿದೆ.

## ಜಾತಿ ಹಾಗೂ ಬುಡಕಟ್ಟು ಸಮುದಾಯಗಳು

ರಾಜ್ಯದ ಇತರೆಡೆಯಂತೆ ಮೈಸೂರು ತಾಲೂಕಿನಲ್ಲಿಯೂ ಹಲವಾರು ಜಾತಿಸಮುದಾಯಗಳಿವೆ. ಮೈಸೂರು ನಗರವು ಕರ್ನಾಟಕದ ಸಾಂಸ್ಕೃತಿಕ ರಾಜಧಾನಿ ಎಂದು ಪ್ರಶಂಸಿತವಾಗಿದೆ. ದೇಶದ ಪ್ರಮುಖ ಪ್ರವಾಸೀ ಕೇಂದ್ರವೂ ಆಗಿರುವ ಮೈಸೂರು ನಗರವು ಸಹಜವಾಗಿಯೇ ದೇಶ–ವಿದೇಶದ ಆಸಕ್ತರನ್ನು ಆಕರ್ಷಿಸಿದೆ. ಉದ್ಯೋಗವೇ ಮೊದಲಾದ ಕಾರಣಗಳಿಗಾಗಿ ವಿಭಿನ್ನ ಭಾಷೆ, ಧರ್ಮ, ಸಂಸ್ಕೃತಿಯ ಜನರೂ ಇಲ್ಲಿ ಬಂದು ನೆಲೆ ನಿಂತಿರುವುದೂ ಉಂಟು. ಹೀಗಾಗಿ ಮೈಸೂರು ನಗರದಲ್ಲಿ ಬಹು ಸಂಸ್ಕೃತಿ, ಜನಾಂಗಗಳನ್ನು ಕಾಣಬಹುದಾಗಿದೆ. ಆದಾಗ್ಯೂ, ಪ್ರಸ್ತುತ ಮೈಸೂರು ತಾಲೂಕಿನಲ್ಲಿ ಬಹು ಹಿಂದಿನಿಂದಲೂ ವಾಸವಿದ್ದ ಸ್ಥಳೀಯ ಅಥವಾ ದೇಸಿಯರೆನಿಸಿದ ಕೆಲವು ಜಾತಿ–ಸಮುದಾಯಗಳ ಸಂಕ್ಷಿಪ್ತ ಪರಿಚಯವನ್ನು ಈ ಮುಂದೆ ಮಾಡಿಕೊಡಲಾಗಿದೆ.

**ಅಗಸ :** ಬಟ್ಟೆ ಮಡಿ ಮಾಡುವುದು ಇವರ ಕುಲಕಸುಬು. ಮಡಿವಾಳ, ದೋಭಿ, ವಣ್ಣ, ಮಡಿವಾಳ ಶೆಟ್ಟಿ ಮುಂತಾದ ಹೆಸರುಗಳಿಂದ ಇವರನ್ನು ಸಂಬೋಧಿಸಲಾಗುತ್ತದೆ. ಬಟ್ಟೆ ಮಡಿಮಾಡುವುದರ ಜೊತೆಗೆ ಮೇಲ್ವರ್ಗದವರ ಮದುವೆ ಹಾಗೂ ದೇವರ ಜಾತ್ರೋತ್ಸವಗಳಲ್ಲಿ ನಡೆಮಡಿ ಹಾಸುವುದು, ಪಂಜು ಹಿಡಿಯುವುದು, ಗ್ರಾಮದೇವತೆಗಳಿಗೆ ದೀವಟಿಗೆ ಸೇವೆ ಸಲ್ಲಿಸುವುದು ಮುಂತಾದ ಕಾರ್ಯಗಳನ್ನು ಮಾಡುವುದು ಇವರ ಸಾಂಪ್ರದಾಯಿಕ ಕಾರ್ಯಗಳೆನಿಸಿವೆ. ಇದಕ್ಕೆ ಪ್ರತಿಯಾಗಿ ಸೇವೆ ಸಲ್ಲಿಸುವವರ ಮನೆಗಳಲ್ಲಿ ವರ್ಷಕ್ಕೊಂದು ಬಾರಿ ಹಡದೆ ಪಡೆಯುವರು. ಜಮೀನು ಇರುವವರು ಕುಲ ಕಸುಬಿನ ಜೊತೆಗೆ ವ್ಯವಸಾಯವನ್ನು ಕೈಗೊಂಡಿರುವರು. ಇತ್ತೀಚೆಗೆ ವಿದ್ಯಾವಂತರಾದವರು ಸರ್ಕಾರಿ ಹಾಗೂ ಖಾಸಗೀ ಕ್ಷೇತ್ರಗಳಲ್ಲಿ ನೌಕರಿ ಪಡೆದಿದ್ದಾರೆ. ಕೆಲವರು ಸ್ವಯಂ ಉದ್ಯೋಗಗಳಲ್ಲಿ ತೊಡಗಿಸಿಕೊಂಡಿದ್ದಾರೆ.

ಇವರ ಮಾತೃಭಾಷೆ ಕನ್ನಡ. ಮಡಿವಾಳ ಮಾಚಯ್ಯ ಅಥವಾ ಮಾಚಿದೇವ ಇವರ ಕುಲದೇವರು. ಜೊತೆಗೆ ಮನೆದೇವರು, ಗ್ರಾಮದೇವರು, ಇಷ್ಟದೇವರುಗಳೆಂದು ಅನೇಕ ದೇವರುಗಳನ್ನು ಪೂಜಿಸುವರು. ಗೌರಿಗಣೇಶ ಹಬ್ಬದಲ್ಲಿ ಭೂಮಿ ಪೂಜೆಯನ್ನೂ ದಸರಾ ಹಬ್ಬದಲ್ಲಿ ಆಯುಧಪೂಜೆಯಂದು ತಮ್ಮ ವೃತ್ತಿಯ ಆಯುಧಗಳನ್ನೂ ಉಬ್ಬೆಯನ್ನೂ ಪೂಜಿಸುವರು. ಮಡಿವಾಳರಲ್ಲಿ ಶಿವಭಕ್ತರೂ, ಲಿಂಗಧಾರಿಗಳೂ, ನಾರಾಯಣ, ವೆಂಕಟೇಶ್ವರನ ಭಕ್ತರಾದ ನಾಮಧಾರಿಗಳೂ ಉಂಟು. ಧಾರ್ಮಿಕ ಆಚರಣೆಗಳನ್ನು ಕೆಲವರು ಪುರೋಹಿತರ ಮಾರ್ಗದರ್ಶನದಲ್ಲಿ ನೆರವೇರಿಸಿದರೆ, ಕೆಲವರು ತಮ್ಮ ಕುಲದ ಸ್ವಾಮಿಗಳ ಸಮ್ಮುಖದಲ್ಲಿ ನಡೆಸುವರು.

**ಅರಸು :** ಜಿಲ್ಲೆಯ ವಿವಿಧ ಭಾಗಗಳೂ ಸೇರಿದಂತೆ ಈ ತಾಲೂಕಿನಲ್ಲೂ ಸಾಕಷ್ಟು ಸಂಖ್ಯೆಯಲ್ಲಿರುವ ಅರಸು ಜಾತಿಯವರು ಕ್ಷತ್ರಿಯ ಕುಲದ ರಾಜಪಿಂಡೆ ಶಾಖೆಗೆ ಸೇರಿದವರಾಗಿದ್ದು, ಮೈಸೂರು ಒಡೆಯರ್ ರಾಜಮನೆತನವೂ ಇದೇ ಮೂಲದ್ದಾಗಿದೆ. ಆತ್ರೇಯ, ವಶಿಷ್ಟ, ವಿಶ್ವಾಮಿತ್ರ ಮುಂತಾದ ಗೋತ್ರಗಳನ್ನುಳ್ಳ ಇವರು ತಮ್ಮನ್ನು ಬ್ರಹ್ಮಕ್ಷತ್ರಿಯರೆಂದು ಗುರುತಿಸಿಕೊಳ್ಳುತ್ತಿದ್ದು, ಕನ್ನಡ ಇವರ ಮಾತೃಭಾಷೆ. ಬಾಲ್ಯದಲ್ಲೇ ಉಪನಯನಾನಂತರ ಜನಿವಾರ ಧರಿಸುವ ಇವರಲ್ಲಿ ಶೈವ, ವೈಷ್ಣವ, ಜೈನ ಧರ್ಮೀಯರಿದ್ದರೂ ವಿವಾಹ ಸಂಬಂಧದಲ್ಲಿ ಇದು ಅಡ್ಡಿಯಾಗುವುದಿಲ್ಲ. ಆದರೂ ವಿವಾಹದಲ್ಲಿ ಸಾಮಾನ್ಯವಾಗಿ ವೈದಿಕ ವಿಧಾನವನ್ನೇ ಇವರು ಅನುಸರಿಸುತ್ತಾರೆ. ಉಪನಯನದ ಸಮಯದಲ್ಲಿ ಬಿಲ್ಲಿನ ತುದಿಗೆ ಮೌರ್ವಿ (ರೇಷ್ಮೆಯ ವಸ್ತ್ರ)ಯನ್ನು ಬಿಗಿದು ಮಾಡುವ ಅಂಬಿನಕಡ್ಡಿ (ಬಾಣ) ಆಚರಣೆಯು ವಿಶಿಷ್ಟವಾಗಿರುತ್ತದೆ. ಬ್ರಾಹ್ಮಣರ ಪೌರೋಹಿತ್ಯದಲ್ಲಿ ನಡೆಯುವ ಮದುವೆಯಲ್ಲಿ ವರನು ಮದುವೆ ಮುಗಿಯುವವರೆಗೂ ಖಡ್ಗ ಇಲ್ಲವೇ ಚಾಕುವನ್ನು ಜೊತೆಯಲ್ಲಿಟ್ಟುಕೊಂಡಿರುವ ಸಂಪ್ರದಾಯವಿದೆ. ವಿಧವೆಯರಿಗೆ ಮರುವಿವಾಹಕ್ಕೆ ಆಸ್ಪದವಿರುವುದಿಲ್ಲ. ಹಬ್ಬ–ಹರಿದಿನಗಳನ್ನು ಧಾರ್ಮಿಕ ಶ್ರದ್ಧೆಯಿಂದ ಆಚರಿಸುವ ಇವರಿಗೆ ದಸರೆ ದೊಡ್ಡ ಹಬ್ಬವಾಗಿದ್ದು, ಆ ಸಂದರ್ಭದಲ್ಲಿ ಕಾಳಿ, ಲಕ್ಷ್ಮಿ ಹಾಗೂ ಸರಸ್ವತಿಯರನ್ನು ವಿಧಿಬದ್ಧವಾಗಿ ಪೂಜಿಸುತ್ತಾರೆ. ಮಾವತ್ತೂರು ಮಾಸ್ತಮ್ಮ ಹಾಗೂ ಮೂಗೂರು ತಿಬ್ಬಾದೇವಿಯರ ಜಾತ್ರೆಗಳಿಗೆ ವಿಶೇಷ ಮಹತ್ವ ನೀಡುವ ಇವರು ಮಂಟೇಸ್ವಾಮಿ ಶಿಷ್ಯರಾದ ರಾಚಪ್ಪಾಜಿ, ಸಿದ್ದಪ್ಪಾಜಿ ಗದ್ದುಗೆಗಳಿಗೂ ನಡೆದುಕೊಳ್ಳುತ್ತಿದ್ದು, ಬೊಪ್ಪಗೌಡನಪುರದಲ್ಲಿರುವ ಮಂಟೇಸ್ವಾಮಿ ಮಠವು ಅರಸು ಜನಾಂಗದವರ ಸುಬರ್ದಿನಲ್ಲಿದೆ. ಇವರಲ್ಲಿ ಸತ್ತವರನ್ನು ಚಿತೆಗೆ ಅರ್ಪಿಸುವ ಸಂಪ್ರದಾಯವಿದ್ದು, ಹತ್ತು ದಿನಗಳ ಸೂತಕದ ನಂತರ ೧೨ನೇ ದಿನ ಶ್ರಾದ್ಧವನ್ನು ಆಚರಿಸಲಾಗುತ್ತದೆ.

**ಈಡಿಗ :** ಈಚಲು, ತೆಂಗು ಹಾಗೂ ಬಗನಿ ಮರಗಳಿಂದ ಹೆಂಡ ಅಥವಾ ಸೇಂದಿ ಇಳಿಸುವುದು ಇವರ ಕುಲಕಸುಬು. ಇತ್ತೀಚೆಗೆ ವ್ಯವಸಾಯ, ವ್ಯಾಪಾರ ಮುಂತಾದ ವೃತ್ತಿಗಳನ್ನು ಅವಲಂಬಿಸಿದ್ದಾರೆ. ಇವರಲ್ಲಿ ಮಡ್ಡಿ ಹಾಗೂ ಬೆಲ್ಲದ ಈಡಿಗರೆಂಬ

ಎರಡು ಪ್ರಮುಖ ಪಂಗಡಗಳ ಜೊತೆಗೆ ದಂಡು ಈಡಿಗರೆಂಬ ಮತ್ತೊಂದು ಒಳ ಪಂಗಡವೂ ಇದ್ದಿತು. ದಂಡು ಈಡಿಗರು ಹಿಂದೆ ಸೈನ್ಯದ ಜೊತೆ ಸದಾ ಸಂಚರಿಸುತ್ತಾ ಸೈನಿಕರಿಗೆ ಹೆಂಡವನ್ನು ಒದಗಿಸಿಕೊಡುತ್ತಿದ್ದರಂತೆ. ಇವರಲ್ಲಿ ಏಳು ಮನೆಯವರು, ಮೂವತ್ತು ಮನೆಯವರು, ಅರವತ್ತು ಮನೆಯವರೆಂಬ ಒಳ ಪ್ರಭೇದಗಳೂ ಉಂಟು. ಇವರು ತೆಲುಗು ಪ್ರದೇಶಗಳಿಂದ ವಲಸೆ ಬಂದಿರಬಹುದೆಂಬ ಅಭಿಪ್ರಾಯ ವಿದ್ವಾಂಸರಲ್ಲಿದೆ. ಆದರೆ ಇವರ ಮನೆ ಮಾತು ಕನ್ನಡ. ಈಡಿಗರು ಹರಿ ಹಾಗೂ ಹರನ ಭಕ್ತರು. ಎಲ್ಲಮ್ಮ ಅಥವಾ ಸುರಭಾಂಡೇಶ್ವರಿ ಹಾಗೂ ಕಾಟಮೇಶ್ವರ ಇವರು ಮನೆದೇವರುಗಳು. ವರ್ಷಕ್ಕೊಂದು ಭಾರಿ ಕುಲಸ್ಥರೆಲ್ಲರೂ ಸೇರಿ ಎಲ್ಲಮ್ಮನ ಪೂಜೆಯನ್ನು ಭಕ್ತಿ ಭಾವದಿಂದ ಮಾಡುತ್ತಾರೆ. ಜೊತೆಗೆ ತಾವು ನೆಲೆಸಿರುವ ಗ್ರಾಮಗಳಲ್ಲಿರುವ ಗ್ರಾಮದೇವತೆಗಳನ್ನೂ ಪೂಜಿಸುವರು.

**ಉಪ್ಪಾರ :** ಮೇಲು ಸಕ್ಕರೆಯವರು, ಸಾಗರವಂಶದವರು, ಭಗೀರಥ ವಂಶದವರು, ಉಪ್ಪಲಿಗಶೆಟ್ಟರು ಎಂದೆಲ್ಲ ಕರೆದುಕೊಳ್ಳುವ ಇವರ ಕುಲಕಸುಬು ಉಪ್ಪನ್ನು ತಯಾರಿಸುವುದಾಗಿತ್ತು. ಪ್ರಸ್ತುತ ಕೂಲಿ ಕೆಲಸ, ಗಾರೆ ಕೆಲಸ, ಹೂಕಟ್ಟುವುದು, ವ್ಯವಸಾಯ ಹಾಗೂ ಕೈಗಾರಿಕಾ ಕಾರ್ಮಿಕರಾಗಿ ತೊಡಗಿಸಿಕೊಂಡಿದ್ದಾರೆ. ಇವರಲ್ಲಿ ಗಾರೆ ಉಪ್ಪಾರರು, ಸುಣ್ಣ ಉಪ್ಪಾರರು, ಸೊಪ್ಪು ಉಪ್ಪಾರರು ಮುಂತಾದ ಪಂಗಡಗಳಿವೆ. ನಾಗರ ಕುಲ, ಬೆಳ್ಳಿಕುಲ, ಚಿಲುಕುದಕುಲ, ಆನೆಕುಲ ಮುಂತಾದ ಹಲವಾರು ಕುಲಗಳಿವೆ. ಇವರು ಬ್ರಾಹ್ಮಣ ಪುರೋಹಿತರ ನೇತೃತ್ವದಲ್ಲಿ ಧಾರ್ಮಿಕ ಕಾರ್ಯಗಳನ್ನು ಕೈಗೊಳ್ಳುವರು. ಇವರಲ್ಲಿ ಶವವನ್ನು ಹೂಳುವ ಪದ್ಧತಿ ಇದ್ದರೂ ಕೆಲವು ಸಲ ಸುಡುವುದೂ ಉಂಟು. ಶ್ರಾವಣದಿಂದ ಯುಗಾದಿವರೆಗಿನ ಎಲ್ಲಾ ಹಿಂದೂ ಹಬ್ಬಗಳನ್ನು ಆಚರಿಸುವವರಾದರೂ ಶೈವ ಸಂಬಂಧಿ ಹಬ್ಬಗಳನ್ನು ವಿಶೇಷವಾಗಿ ಆಚರಿಸುವರು. ಭಗೀರಥನನ್ನು ತಮ್ಮ ಕುಲದ ಆರಾಧ್ಯ ವ್ಯಕ್ತಿಯೆಂದು ಪರಿಗಣಿಸಿದ್ದಾರೆ.

**ಒಕ್ಕಲಿಗ :** ವ್ಯವಸಾಯ ಮಾಡುವುದನ್ನೇ ಸಾಂಪ್ರದಾಯಿಕ ಉದ್ಯೋಗವನ್ನಾಗಿ ಮಾಡಿಕೊಂಡು ಬಂದವರನ್ನು ಒಕ್ಕಲು ಮಕ್ಕಳು ಎಂದು ಗುರುತಿಸಲಾಗುತ್ತದೆ. ಹಿಂದೆ ಗ್ರಾಮದ ಮುಖಂಡತ್ವ ಇವರದೇ ಆಗಿರುತ್ತಿದ್ದುದರಿಂದ ಗೌಡ ಎಂಬ ಹೆಸರೂ ಇವರಿಗಿದೆ. ಇತ್ತೀಚಿನ ದಿನಗಳಲ್ಲಿ ವ್ಯವಸಾಯದ ಜೊತೆಗೆ ವ್ಯಾಪಾರ, ನೌಕರಿ ಮುಂತಾದ ಇತರ ಉದ್ಯೋಗಗಳಲ್ಲೂ ತೊಡಗಿಸಿಕೊಂಡಿದ್ದಾರೆ. ಗಂಗಡಿಕಾರ, ಕುಂಚಿಟಿಗ, ಹಳ್ಳಿಕಾರ, ನಾಮಧಾರಿ, ದಾಸೊಕ್ಕಲಿಗ, ಮುಂತಾದ ಒಳ ಪಂಗಡಗಳಿವೆ. ಆನೆಕುಲ, ಆವುಕುಲ, ಬಿಚ್ಚಾಲೆಕುಲ, ಬೆಳ್ಳಿಕುಲ, ಚಂದ್ರಕುಲ, ಚಿನ್ನಕುಲ, ಹೂವುಕುಲ, ಕಳ್ಳಿಕುಲ, ಕಸ್ತೂರಿಕುಲ, ಕೊಮ್ಮೆಕುಲ, ಮೊಲೆಕುಲ, ಸಾಮೆಕುಲ, ತೆನೆಕುಲ, ವಾಲೆಕುಲ ಮುಂತಾದ ಕುಲಗಳು ಇವರಲ್ಲಿವೆ. ಸೋಮವಾರದವರು, ಶನಿವಾರದವರು ಎಂದು ತಾವು ಪೂಜಿಸುವ ದೇವರ ಹಿನ್ನಲೆಯಲ್ಲಿಯೂ ಇವರು ಗುರುತಿಸಲ್ಪಡುತ್ತಾರೆ. ಸೋಮವಾರದವರು ನಂಜುಂಡೇಶ್ವರ, ಮಾದೇಶ್ವರ, ಮುಡುಕುತೊರೆ ಮಲ್ಲಿಕಾರ್ಜುನ, ಆದಿಚುಂಚನಗಿರಿ

ಭೈರವ, ಗಂಗಾಧರ ಮೊದಲಾದ ಶೈವ ಪರಂಪರೆಯ ಒಕ್ಕಲಾದರೆ, ಶನಿವಾರದವರು ತಿರುಪತಿ ವೆಂಕಟರಮಣ, ಮೇಲುಕೋಟೆ ಚೆಲುವನಾರಾಯಣ, ಬಿಳಿಗಿರಿರಂಗನಾಥ ಮುಂತಾದ ವಿಷ್ಣುವಿನಂಶದ ಒಕ್ಕಲಾಗಿರುತ್ತಾರೆ ಜೊತೆಗೆ ಸ್ಥಳೀಯ ಗ್ರಾಮದೇವತೆಗಳಿಗೂ ನಡೆದುಕೊಳ್ಳುತ್ತಾರೆ.

**ಕುಂಬಾರ :** ಮಣ್ಣಿನಿಂದ ಮಡಿಕೆ, ಕುಡಿಕೆ ಹೆಂಚುಗಳನ್ನು ಮಾಡುವುದು ಇವರ ಮೂಲ ವೃತ್ತಿ. ಇತ್ತೀಚೆಗೆ ಕೆಲವರು ವ್ಯವಸಾಯ, ವ್ಯಾಪಾರ, ನೌಕರಿ ಹಾಗೂ ಕಾರ್ಮಿಕರಾಗಿ ಜೀವನ ಸಾಗಿಸುತ್ತಿದ್ದಾರೆ. ಕುಂಬಾರಶೆಟ್ಟಿ, ಹರವಿ ಕುಂಬಾರ, ಬೈಲು ಕುಂಬಾರ ಮೊದಲಾದ ಒಳಪಂಗಡಗಳಿವೆ. ಇವರು ವೈವಾಹಿಕ ಸಂಬಂಧಗಳನ್ನು ಒಳಪಂಗಡಗಳೊಡನೆ ಬೆಳೆಸುವುದಿಲ್ಲ. ಬ್ರಾಹ್ಮಣ ಪುರೋಹಿತರ ಮಾರ್ಗದರ್ಶನದಲ್ಲಿ ತಮ್ಮೆಲ್ಲ ಧಾರ್ಮಿಕ ಕಾರ್ಯಗಳನ್ನು ನೆರವೇರಿಸಿಕೊಳ್ಳುವರು.

**ಕುರುಬ :** ಕುರಿಸಾಕಿ ಅವುಗಳ ಉಣ್ಣೆಯಿಂದ ಕಂಬಳಿ ನೇಯುವುದು ಇವರ ಮೂಲ ಕಸುಬಾದರೂ ಈಚೆಗೆ ವ್ಯವಸಾಯ, ವ್ಯಾಪಾರ, ನೌಕರಿ, ಕಾರ್ಮಿಕರಾಗಿಯೂ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಹಾಲು ಕುರುಬ, ಹಂಡೆ ಕುರುಬ, ಕಂಬಳಿ ಕುರುಬ, ಹೊಸಕುರುಬ, ಹಳೆಕುರುಬ, ಕುಂಬಿಕುರುಬ, ಸಾದ ಕುರುಬ, ಮುಳ್ಳುಕುರುಬ ಮೊದಲ ಒಳ ಪ್ರಭೇದಗಳಿವೆ. ಪ್ರತಿಯೊಂದು ಪ್ರಭೇದಗಳಲ್ಲಿಯೂ ಗಿಡ, ಮರ, ಪ್ರಾಣಿಗಳ ಕುಲಲಾಂಛನ ಹೊಂದಿರುವ ಹಲವು ಹೊರವಿವಾಹದ ಪಂಗಡಗಳಿವೆ. ಸಾಮಂತ, ಗೌಡ, ಬಸರಿ, ಚೀಲ, ಬಳೆಗಾರ, ಬೆಣಚು, ಬೇವು, ಬೀರ, ವಾಣ, ಬೆಣ್ಣೆ, ಗಾಲಿ, ಗರಿಕೆ, ಗೊಬ್ಬರ, ಗುಡಿ, ಹೊನ್ನು, ಜೀರಿಗೆ, ತುಂಬೆ, ವನ, ಲಕ್ಷ್ಮೀದೇವಿ, ಗಣಕ, ಬಡಗ, ಬಾಳು, ಆಡು, ಆನೆ, ಅಣ್ಣೆ, ಅರಿಶಿನ, ಆಲು, ಅತ್ತಿ, ಬಂಡಿ, ಎಮ್ಮೆ, ಚೂರಿ, ಹೊನ್ನೆ, ದಾಸ, ಬೆಳ್ಳಿ, ಸಾಮ, ಹಾವು, ಚೇಳು, ಅವರೆ ಚಂದನ ಮುಂತಾದ ನೂರಹನ್ನೊಂದು ಕುಲಗಳಿವೆ.

ಹಾಲು ಕುರುಬರಲ್ಲೇ ಹತ್ತಿ ಕಂಕಣದವರು ಹಾಗೂ ಉಣ್ಣೆ ಕಂಕಣದವರು ಎಂಬ ಒಳ ಪ್ರಭೇದವೂ ಉಂಟು. ಎಲ್ಲಾ ಸಂಪ್ರದಾಯಾಚರಣೆಗಳಲ್ಲಿ ಹೊಂದಾಣಿಕೆ ಇದ್ದರೂ ಮದುವೆ ಸಂದರ್ಭದಲ್ಲಿ ಕಂಕಣ ಕಟ್ಟುವಾಗ ಈ ಭೇದ ಗಮನಾರ್ಹ–ವಾದುದಾಗುತ್ತದೆ. ಇವರ ಕುಲ ದೇವರು ಬೀರೇಶ್ವರ ಅಥವಾ ಬೀರಪ್ಪ. ಕಡಬಡಯ್ಯ ಕುಣಿತ ಇವರ ಜಾತಿಯವರಿಗೆ ಮೀಸಲಾದ ಧಾರ್ಮಿಕ ಕುಣಿತ. ಲಿಂಗಧೀರರು ಹಾಗೂ ನಂದಿಧ್ವಜ ಕುಣಿತವೂ ಇವರಲ್ಲಿದೆ. ಮಾದೇಶ್ವರ, ಮಂಟೇಸ್ವಾಮಿಗಳಿಗೆ ಗುಡ್ಡರನ್ನು ಬಿಡುವಂತೆ ತಮ್ಮ ಕುಲದೇವರಾದ ಬೀರೇಶ್ವರನಿಗೂ ಬಿಡುತ್ತಾರೆ. ಮೈಲಾರಲಿಂಗನಿಗೆ ತಮ್ಮನ್ನು ಅರ್ಪಿಸಿಕೊಂಡವರನ್ನು ಗೊರವರೆಂದು ಹೇಳುವರು. ದಾಸಕುಲದವರು ತಿಮ್ಮಪ್ಪನಿಗೆ ದಾಸರನ್ನು ಬಿಡುತ್ತಾರೆ. ಶುಭಾಶುಭ ಸಂದರ್ಭಗಳಲ್ಲಿ ಇವರನ್ನು ಆಹ್ವಾನಿಸುವರು. ಎಲ್ಲ ಹಿಂದೂಗಳಂತೆ ಯುಗಾದಿಯಿಂದ ಶಿವರಾತ್ರಿಯವರೆಗಿನ ಎಲ್ಲಾ ಹಬ್ಬಗಳನ್ನು ಆಚರಿಸುವರು. ಸತ್ತವರನ್ನು ಸಾಧಾರಣವಾಗಿ ಹೂಳುವುದುಂಟು.

**ಕೊರಮ :** ಇವರನ್ನು ಕೊರಮ, ಕೊರವ, ಕೊರಚ, ಕೊರಮಶೆಟ್ಟಿ ಮುಂತಾದ ಹೆಸರುಗಳಿಂದ ಕರೆಯಲಾಗುತ್ತದೆ. ಮೂಲತಃ ಅಲೆಮಾರಿ ಬುಡಕಟ್ಟಿನವರಾಗಿದ್ದ ಇವರು ಕ್ರಮೇಣ ಅಲ್ಲಲ್ಲಿ ಒಂದೆಡೆ ಸ್ಥಿರವಾಗಿ ನೆಲೆಸಿದ್ದಾರೆ. ಶಾತಪಾಡ, ಕಾವಾಡ, ಮ್ಯಾನಪಾಡ, ಮ್ಯಾನರಗುತ್ತ ಎಂಬ ನಾಲ್ಕು ಬೆಡಗುಗಳಿವೆ. ಇವರಲ್ಲಿ ಶಾತಪಾಡ, ಮಾನ್ಯಪಾಡ ಬೆಡಗಿನವರು ಅಣ್ಣ ತಮ್ಮಂದಿರು. ಆದ್ದರಿಂದ ಅವರಲ್ಲಿ ಯಾವುದೇ ವೈವಾಹಿಕ ಸಂಬಂಧ ಇರುವುದಿಲ್ಲ. ಕಾವಾಡ ಹಾಗೂ ಶಾತವಾಡ ಬೆಡಗುಗಳಲ್ಲಿ ವಿವಾಹ ಸಂಬಂಧಗಳಿಗೆ ಅವಕಾಶವಿದೆ. ಕೊರಮರಲ್ಲಿ ಕುಕ್ಕೆಕೊರಮರು, ಹಗ್ಗದ ಕೊರಮರು, ಕುಂಚಿಕೊರಮರು, ತೆರಿಗೆ ಕೊರಮರು, ಈಚಲು ಕೊರಮರು, ಕಂಬಳಿ ಕೊರಮರು, ವಾದ್ಯದ ಕೊರಮರು ಮುಂತಾದ ವೃತ್ತಿ ಹಿನ್ನೆಲೆಯಲ್ಲಿ ಹುಟ್ಟಿದ ಹಲವು ಒಳಪಂಗಡಗಳಿವೆ.

ಬಿದಿರಿನ ಕೈಗಾರಿಕೆ ಕೊರಮರ ಪ್ರಧಾನ ಕಸುಬು. ಇದನ್ನು ಪೂಜ್ಯ ಭಾವನೆಯಿಂದ ಗೌರವಿಸುತ್ತಾರೆ. ಕುಟುಂಬದ ಹಿರಿಯರು ಕಿರಿಯರಿಗೆ ವಂಶಪಾರಂಪರ್ಯವಾಗಿ ಇದನ್ನು ಕಲಿಸಿಯೇ ತೀರಬೇಕೆಂಬ ಭಾವನೆ ಇದೆ. ಇತ್ತೀಚೆಗೆ ಬೇರೆ ಬೇರೆ ಉದ್ಯೋಗಗಳಲ್ಲಿಯೂ ತೊಡಗಿಸಿಕೊಳ್ಳುತ್ತಿದ್ದಾರೆ. ಇದರ ಜೊತೆಗೆ ಹಂದಿ ಸಾಕುವುದು, ಕೃಷಿ, ಕೂಲಿ, ಬುಟ್ಟಿ ಹಾಗೂ ಚಾಪೆಗಳನ್ನು ಎಣಿಯುವುದು, ಬಂಜೆಗೆ ಔಷಧಿ ಕೊಡುವುದು ಮುಂತಾದ ಉಪಕಸುಬುಗಳನ್ನು ಮಾಡುತ್ತಾರೆ. ಧಾರ್ಮಿಕ ಕಾರ್ಯಗಳನ್ನು ಅವರ ಕುಲದ ಹಿರಿಯರಾಗಲೀ ಬ್ರಾಹ್ಮಣ ಪುರೋಹಿತರಾಗಲೀ ನಡೆಸಿಕೊಡುವರು. ಇವರು ಸತ್ತವರನ್ನು ಹೂಳುತ್ತಾರೆ. ವೆಂಕಟರಮಣ, ಮುನೇಶ್ವರ, ಮಾರಮ್ಮ, ಚಾಮುಂಡಮ್ಮ ಮುಂತಾದ ದೇವರುಗಳನ್ನು ಪೂಜಿಸುವರು.

**ಕ್ಷೌರಿಕ :** ಮೈಸೂರು ತಾಲೂಕಿನಲ್ಲಿ ಇವರನ್ನು ಆರ್ಯನಯನ ಕ್ಷತ್ರಿಯ, ಅಂಗಾರಕ, ಹಜಾಮ, ಹಡಪದವರು, ನಾಯಿಂದ, ಮೇಳಗಾರ, ಭಜಂತ್ರಿ, ನಾಪಿತ, ಕೆಲಸಿ, ಮುಂತಾದ ಹೆಸರುಗಳಿಂದ ಕರೆಯಲಾಗುತ್ತದೆ. ಕ್ಷೌರಿಕ ವೃತ್ತಿ ಇವರ ಸಾಂಪ್ರದಾಯಿಕ ಉದ್ಯೋಗವಾಗಿದ್ದು ವಿವಾಹ ಮುಂತಾದ ಮಂಗಳ ಕಾರ್ಯಗಳಿಗೆ ಮಂಗಳ ವಾದ್ಯ ನುಡಿಸುವುದೂ ಉಂಟು. ಇವರಲ್ಲಿ ಕುಲ ಪ್ರಭೇದಗಳಿಲ್ಲ. ಜಾತಿ ಪಂಚಾಯಿತಿ ಅಸ್ತಿತ್ವದಲ್ಲಿದೆ. ಅಂಗಾರಕ ದೇವತೆಗಳ ಕ್ಷೌರಿಕ ಎಂಬ ನಂಬಿಕೆ ಇರುವುದರಿಂದ ಮಂಗಳವಾರದಂದು ಇವರು ಕಸುಬು ಮಾಡುವುದಿಲ್ಲ. ಕುಲ ಕಸುಬಿನ ಜೊತೆಗೆ ಗ್ರಾಮಗಳಲ್ಲಿ ನೆಲೆಸಿರುವ ಕೆಲವರು ಕೃಷಿ, ಪಶುಪಾಲನೆ ಮತ್ತಿತರ ವೃತ್ತಿಗಳನ್ನು ಕೈಗೊಂಡಿದ್ದಾರೆ. ತೆಲುಗು ಮನೆ ಮಾತಾದರೂ ಕನ್ನಡವನ್ನು ಬಲ್ಲವರಾಗಿದ್ದಾರೆ. ಬ್ರಾಹ್ಮಣ ಪುರೋಹಿತರು ಇವರ ಧಾರ್ಮಿಕ ಕಾರ್ಯಗಳನ್ನು ನೆರವೇರಿಸಿಕೊಡುವರು. ಶಿವ ಹಾಗೂ ವಿಷ್ಣುವನ್ನು ಪೂಜಿಸುವುದರ ಜೊತೆಗೆ ಮಹದೇಶ್ವರ, ಸಿದ್ಧಪ್ಪಾಜಿ, ನಂಜುಂಡೇಶ್ವರ ಮುಂತಾದ ದೇವರುಗಳನ್ನು ಪೂಜಿಸುವರು.

**ಗಾಣಿಗ :** ಗಾಣದ ಮೂಲಕ ಎಣ್ಣೆ ತೆಗೆಯುವ ವೃತ್ತಿಯನ್ನು ಪಾರಂಪರಿಕವಾಗಿ ಅವಲಂಬಿಸಿದವರನ್ನು ಗಾಣಿಗರೆಂದು ಕರೆಯಲಾಗುತ್ತದೆ. ಇವರಲ್ಲಿ ಪ್ರಧಾನವಾಗಿ

ಜ್ಯೋತಿನಗರ, ಸಜ್ಜನ, ಜ್ಯೋತಿಪಣ ಎಂಬ ಮೂರು ಗುಂಪುಗಳನ್ನು ನೋಡಬಹುದು. ಜ್ಯೋತಿ ನಗರದವರು ತಾವು ನಗರ್ತರ ಗುಂಪಿಗೆ ಸೇರಿದವರೆಂದು ಹೇಳಿಕೊಳ್ಳುವುದುಂಟು. ಇವರು ಜನಿವಾರವನ್ನು ಧರಿಸುತ್ತಾರೆ. ಸಜ್ಜನ ಪಂಗಡದವರು ಲಿಂಗಾಯಿತ ಆಚಾರ–ವಿಚಾರಗಳ ಪ್ರಭಾವಕ್ಕೆ ಒಳಗಾಗಿ ತಮ್ಮನ್ನು ಅಪ್ಪಟ ವೀರಶೈವರೆಂದೇ ಗುರುತಿಸಿಕೊಳ್ಳುವರು. ಜ್ಯೋತಿಪಣದವರು ತಮ್ಮ ಕುಲ ಕಸುಬಿಗನುಗುಣವಾಗಿ ಹೆಸರು ಬಂದಿದೆ ಎಂದುಕೊಳ್ಳುತ್ತಾರೆ. ಗಾಣಿಗರಲ್ಲಿ ಕೆಲವರು ತಾವು ಕ್ಷತ್ರಿಯ ಕುಲದಿಂದ ಬಂದವರೆಂದು ಹೇಳುವುದುಂಟು. ಮಹದೇಶ್ವರ, ನಂಜುಂಡೇಶ್ವರ, ಭೈರವ, ಮಲ್ಲಿಕಾರ್ಜುನ, ವೆಂಕಟರಮಣ ಹಾಗೂ ಅನೇಕ ಗ್ರಾಮದೇವತೆಗಳನ್ನು ಗಾಣಿಗರು ಆರಾಧಿಸುತ್ತಾರೆ.

**ಗೂರ್ಖಾ :** ನೇಪಾಲ ದೇಶದವರಾದ ಇವರು ಉದ್ಯೋಗ ಅರಸಿ ಇಲ್ಲಿಗೆ ಬಂದವರು. ಅಂಗಡಿ ಮುಂಗಟ್ಟುಗಳು, ಮನೆ, ತೋಟಗಳನ್ನು ರಾತ್ರಿಯ ವೇಳೆ ಕಾಯುವ ಕಾಯಕ ಇವರದು. ಮೈಸೂರು ತಾಲೂಕಿನಲ್ಲಿರುವ ಅಲ್ಪ ಸಂಖ್ಯಾತರಲ್ಲಿ ಇವರೂ ಸೇರಿದ್ದಾರೆ. ಮೈಸೂರು ನಗರ ಹಾಗೂ ಗ್ರಾಮಾಂತರ ಪ್ರದೇಶಗಳಲ್ಲಿ ತಮಿಳು, ತೆಲುಗು, ಮಲೆಯಾಳಿ ಮುಂತಾದ ಭಾಷಾ ಸಮುದಾಯದವರು ವಲಸಿಗರಾಗಿ ಬಂದು ನೆಲೆಸಿದ್ದಾರೆ. ಇವರಲ್ಲದೆ, ಲಂಬಾಣಿ, ಡೋಗ್ರಿ, ಹಕ್ಕಿಪಿಕ್ಕಿ, ಗೋಸಾಯಿ, ಸಿಖ್ಖರು ಮುಂತಾದವರು ತಾಲೂಕಿನಲ್ಲಿದ್ದಾರೆ ಅಲ್ಲದೆ ತಾಲೂಕಿನ ಗುಮಚನಹಳ್ಳಿ ಪ್ರದೇಶದಲ್ಲಿ ಇತ್ತೀಚೆಗೆ ಕೆಲವು ಕಾಡುಕುರುಬ ಕುಟುಂಬಗಳು ನೆಲೆಸಿವೆ.

**ಜಾಡಮಾಲಿ :** ಇವರನ್ನು ಆದಿ ದ್ರಾವಿಡ, ಜಲಗಾರ, ಪೌರ ಕಾರ್ಮಿಕ ಮುಂತಾದ ಹೆಸರುಗಳಿಂದ ಗುರುತಿಸಲಾಗುತ್ತದೆ. ಇವರಲ್ಲಿ ಕೆಲವರು ಪೌರಕಾರ್ಮಿಕರಾಗಿ ನಗರಪಾಲಿಕೆಯಿಂದ ನೌಕರಿ ಪಡೆದುಕೊಂಡಿದ್ದಾರೆ. ಕೆಲವರು ಚಮ್ಮಾರರಾಗಿಯೂ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಇವರಲ್ಲಿ ಜಾತಿ ಸಂಘ ಅಸ್ತಿತ್ವದಲ್ಲಿದ್ದು, ದೊಡ್ಡ ಯಜಮಾನ, ಚಿಕ್ಕ ಯಜಮಾನರಿರುವರು. ಸಾಮಾನ್ಯವಾಗಿ ವಾರಕ್ಕೊಮ್ಮೆ ಸಭೆ ಸೇರಿ ಒಳಿತು–ಕೆಡುಕುಗಳ ಬಗ್ಗೆ, ಹಬ್ಬ–ಹರಿದಿನಗಳ ಬಗ್ಗೆ ಚರ್ಚಿಸುವರು. ಆದಿಶಕ್ತಿ ಮಹಾಕಾಳಮ್ಮ ಇವರ ಕುಲದೇವತೆ. ಶ್ರೀರಂಗಂ ರಂಗನಾಥ, ಪೆರ್ಮಾಳು ಗೋಪಾಲ ಕೃಷ್ಣ, ಆದಿ ಚಿಕ್ಕಾಲಮ್ಮ, ಬಣ್ಣಾರಿ ಅಮ್ಮ ಮೊದಲಾದ ದೈವಗಳನ್ನು ಪೂಜಿಸುವರು. ಸಂಕ್ರಾಂತಿ ಅಥವಾ ಪೊಂಗಲ್ ಹಬ್ಬವನ್ನು ಶ್ರದ್ಧಾ ಭಕ್ತಿಯಿಂದ ಆಚರಿಸುವರು.

**ದರ್ಜಿ :** ಸಾಳೆ, ಶಿಂಪಿ, ನಾಮದೇವ್, ಸಿಂಪಿಗ, ಚಿಪ್ಪಿಗ, ಭಾವಸಾರ್ ಕ್ಷತ್ರಿಯ ಮುಂತಾದ ಹೆಸರುಗಳಿಂದ ಕರೆಸಿಕೊಳ್ಳುವ ಇವರು ಮರಾಠ ಮೂಲದವರು. ಸಾಮಾನ್ಯವಾಗಿ ಬಟ್ಟೆ ಹೊಲಿಯುವ ವೃತ್ತಿಯನ್ನು ಪ್ರಧಾನವಾಗಿ ಕೈಗೊಂಡಿರುವ ಇವರಲ್ಲಿ ಆರ್ಥಿಕವಾಗಿ ಸದೃಢವಾಗಿರುವವರು ಜವಳಿ ಅಂಗಡಿಗಳನ್ನು ಇಟ್ಟುಕೊಂಡಿದ್ದಾರೆ. ಇವರಲ್ಲಿ ಅಪರಿಮಿತ ಸಂಖ್ಯೆಯ ಕುಲ ಹಾಗೂ ಗೋತ್ರಗಳನ್ನು ನೋಡಬಹುದು. ಘರಾಣ ಎಂಬುದು ಇವರ ಮನೆತನವನ್ನು ನಿರ್ದೇಶಿಸುತ್ತದೆ. ರಂಪೂರೆ, ಸಾಳೊಂಕಿ, ನಾಮ್‌ದೇವ್ ಮುಂತಾದ ಘರಾಣಗಳಿದ್ದು, ಒಂದೇ ಘರಾಣದವರಲ್ಲಿ ವೈವಾಹಿಕ

ಸಂಬಂಧ ಬೆಳೆಸುವುದಿಲ್ಲ. ವಿಷ್ಣು ಹಾಗೂ ಶಿವ ಇಬ್ಬರನ್ನೂ ಸಮಾನವಾಗಿ ನೋಡುವುದರ ಜೊತೆಗೆ ಕುಲದೇವತೆ ಪಂಢರಾಪುರದ ವಿಠೋಬ ಹಾಗೂ ಇಂಗುಳಾದೇವಿ, ಪಾಂಡುರಂಗ, ಖಂಡೋಬ, ರುಕ್ಮಿಣಿ, ಭವಾನಿ, ಎಲ್ಲಮ್ಮ, ಪಟ್ಟಲದಮ್ಮ ಮುಂತಾದ ದೇವರುಗಳನ್ನು ಪೂಜಿಸುತ್ತಾರೆ. ಆಷಾಢ ಹಾಗೂ ಕಾರ್ತಿಕ ಶುದ್ಧ ಏಕಾದಶಿಗಳಂದು ಪಂಢರಾಪುರ ಯಾತ್ರೆಗೆ ಹೋಗುವುದಕ್ಕೆ ಪ್ರಾಮುಖ್ಯತೆ ನೀಡುತ್ತಾರೆ. ಸಂತ ನಾಮದೇವ, ತುಕಾರಾಮರನ್ನು ಭಕ್ತಿಯಿಂದ ನೆನೆಯುತ್ತಾರೆ. ಹಬ್ಬ – ಜಾತ್ರೆಗಳ ಸಂದರ್ಭಗಳಲ್ಲಿ ಹೋಮ–ಹವನ ಇತ್ಯಾದಿಗಳನ್ನು ನಡೆಸುವರು. ಪ್ರಥಮ ಏಕಾದಶಿ ಹಾಗೂ ನವರಾತ್ರಿ ಇವರ ಪ್ರಮುಖ ಹಬ್ಬಗಳಾಗಿದ್ದು, ನವರಾತ್ರಿ ಹಬ್ಬವನ್ನು ವಿಶಿಷ್ಠವಾಗಿ ಆಚರಿಸುವರು.

**ಬಣಜಿಗ :** ಬಣಜಿಗ ಎಂಬ ಶಬ್ದ ವಣಿಕ ಎಂಬ ಸಂಸ್ಕೃತ ಮೂಲದಿಂದ ಬಂದಿದೆ. ಎಲೆ ಬಣಜಿಗ, ದಾಸ ಬಣಜಿಗ, ಸೆಟ್ಟಿ ಬಣಜಿಗ, ನಾಯ್ಡು ಬಣಜಿಗ ಮುಂತಾದ ಪಂಗಡಗಳಿವೆ. ವ್ಯಾಪಾರ ವಾಣಿಜ್ಯ ಇವರ ಮೂಲ ಕಸುಬು. ಇತ್ತೀಚೆಗೆ ವ್ಯವಸಾಯ, ನೌಕರಿ ಮೊದಲಾದ ಕ್ಷೇತ್ರಗಳಲ್ಲೂ ತೊಡಗಿಸಿಕೊಂಡಿದ್ದಾರೆ. ಸೆಟ್ಟಿ ಬಣಜಿಗರು ಬಳೆ ವ್ಯಾಪಾರ ಮಾಡುವರು. ದಾಸ ಬಣಜಿಗರು ಪೂರ್ವದಲ್ಲಿ ಜೈನ ಕ್ಷತ್ರಿಯರಾಗಿದ್ದು, ಆನಂತರದಲ್ಲಿ ರಾಮಾನುಜಾಚಾರ್ಯರ ಪ್ರಭಾವದಿಂದ ವೈಷ್ಣವ ಮತಾವಲಂಬಿ–ಗಳಾದರೆಂಬ ಅಭಿಪ್ರಾಯವಿದೆ. ಇವರಲ್ಲಿ ಕನ್ನಡ ಮತ್ತು ತೆಲುಗು ಭಾಷೆ ಬಲ್ಲವರಿದ್ದಾರೆ. ತೆಲುಗು ಬಣಜಿಗರು ಶೈವ ಅಥವಾ ವೈಷ್ಣವರಾಗಿದ್ದು, ಬ್ರಾಹ್ಮಣ ಪುರೋಹಿತರ ಮಾರ್ಗದರ್ಶನದಲ್ಲಿ ಧಾರ್ಮಿಕ ಕಾರ್ಯಗಳನ್ನು ನಡೆಸುವರು.

**ಬೆಸ್ತ :** ಇವರನ್ನು ತೊರೆಯರು, ಗಂಗಾಮತಸ್ಥರು, ಪರಿವಾರದವರು, ನಾಯಕರು ಮೊದಲಾದ ಹೆಸರುಗಳಿಂದ ಕರೆಯುವರು. ಇವರಲ್ಲಿ ಕುಲಪದ್ಧತಿ ಪ್ರಧಾನವಾಗಿದ್ದು, ಒಂದೇ ಕುಲದವರು ವಿವಾಹ ಬೆಳೆಸುವುದಿಲ್ಲ. ವ್ಯವಸಾಯ, ಬೇಟೆ, ಮೀನು ಶಿಕಾರಿ ಮುಂತಾದ ವೃತ್ತಿಗಳನ್ನು ಮಾಡುವ ಇವರಲ್ಲಿ ಬಹುತೇಕ ಜನ ಕೂಲಿ ಮಾಡಿಯೇ ಜೀವನ ಸಾಗಿಸುತ್ತಾರೆ. ಇವರಲ್ಲೂ ಪಂಚಾಯಿತಿ ಅಥವಾ ಕೂಟ ವ್ಯವಸ್ಥೆ ಬಲವಾಗಿದ್ದು, ಸಂದರ್ಭ ಒದಗಿದರೆ ಮೂರು ಕಡೆಯ ಯಜಮಾನರು ಒಂದೆಡೆ ಸೇರಿ ನ್ಯಾಯ ನಡೆಸುತ್ತಾರೆ. ಗಂಗಾಮತಸ್ಥರದು ಹನ್ನೊಂದು ಬಣ್ಣವಾದರೆ, ನಾಯಕರು ಹನ್ನೆರಡು ಬಣ್ಣದವರು. ಈ ವ್ಯತ್ಯಾಸವನ್ನು ವಿವಾಹ ಸಂದರ್ಭದಲ್ಲಿ ಅತ್ಯಂತ ಸೂಕ್ಷ್ಮವಾಗಿ ಪರಿಗಣಿಸುವರು. ಇವರಲ್ಲಿ ಗುಡ್ಡಯ್ಯ, ದಾಸಯ್ಯ ಪರಂಪರೆ ವ್ಯಾಪಕವಾಗಿದ್ದು, ಇವರ ನೇತೃತ್ವದಲ್ಲಿಯೇ ಧಾರ್ಮಿಕ ಕಾರ್ಯಗಳು ನಡೆಯುತ್ತವೆ. ಗೌರಿಹಬ್ಬ ಅಥವಾ ಮಹಾಲಯ ಅಮಾವಾಸ್ಯೆಯಂದು ಪೂರ್ವಿಕರಿಗೆ ಎಡೆ ಇಟ್ಟು ಅವರನ್ನು ಸ್ಮರಿಸಿಕೊಳ್ಳುತ್ತಾರೆ. ವರ್ಷಕ್ಕೊಂದು ಸಲ ಗೌರಿ ಹಬ್ಬದ ದಿನ ಹೊಳೆಗೆ ಹೋಗಿ ಗಂಗೆ ಪೂಜೆ ಮಾಡುವರು.

**ಬ್ರಾಹ್ಮಣ :** ಬ್ರಾಹ್ಮಣ ಪದವು ಬ್ರಹ್ಮಜ್ಞಾನದಿಂದ ಉತ್ಪತ್ತಿಯಾಗಿದೆ ಎಂದು ಹೇಳಲಾಗುವ ಇವರಲ್ಲಿ ಶಂಕರಾಚಾರ್ಯರ ಅನುಯಾಯಿಗಳಾದ ಸ್ಮಾರ್ತರು, ರಾಮಾನುಜಾಚಾರ್ಯರ ಅನುಯಾಯಿಗಳಾದ ಶ್ರೀವೈಷ್ಣವರು, ಮಧ್ವಾಚಾರ್ಯರ ಅನುಯಾಯಿಗಳಾದ ಮಾಧ್ವರು,

ಎಂಬ ಒಳ ಪಂಗಡಗಳೂ, ಹಲವು ಉಪಪಂಗಡಗಳೂ ಇವೆ. ಸ್ಮಾರ್ತರಲ್ಲಿ ಮುಲಕನಾಡು, ಸೀರನಾಡು, ವೇಲನಾಡು, ಬಡಗನಾಡು, ಬಬ್ಬೂರಕಮ್ಮೆ, ಉಲುಚುಕಮ್ಮೆ, ಹೊಯ್ಸಳ ಕರ್ನಾಟಕ, ಸಂಕೇತಿ ಮುಂತಾದವುಗಳಿವೆ. ಮಾಧ್ವ ಸಂಪ್ರದಾಯದ ಅನುಯಾಯಿಗಳಲ್ಲಿ ದೇಶಸ್ಥರ ಉತ್ತರಾಧಿ ಮಠ, ರಾಘವೇಂದ್ರ ಮಠ, ವ್ಯಾಸರಾಯ ಮಠ, ಉಡುಪಿಯ ಅಷ್ಟ ಮಠಗಳು (ಶಿವಳ್ಳಿ ಮಾಧ್ವರು) ಮುಂತಾದ ಮಠದವರಿದ್ದಾರೆ. ಶ್ರೀವೈಷ್ಣವರಲ್ಲಿ ತೆಂಗಲೆ ಹಾಗೂ ವಡಗಲೆ ಎಂಬೆರಡು ಮುಖ್ಯ ಸಂಪ್ರದಾಯಗಳಿದ್ದು, ಅವರಲ್ಲಿ ಮಂಡೆಯಂ ಅಯ್ಯಂಗಾರ್, ಹೆಮ್ಮಿಗೆಯಾರ್, ತಿರುಮಲಯಾರ್, ಹೆಬ್ಬಾರ್ ಮೊದಲಾದ ಉಪಪಂಗಡಗಳಿವೆ. ಸ್ಮಾರ್ತರಲ್ಲಿ ಸಂಕೇತಿಗಳು ಕೆಲವು ದ್ರಾವಿಡ ಶಬ್ದ ಮಿಶ್ರಿತ ಭಾಷೆಯನ್ನೂ, ಮುಲಕನಾಡು ಸ್ಮಾರ್ತರು ತೆಲುಗು ಭಾಷೆಯನ್ನೂ, ಮಾಧ್ವರಲ್ಲಿ ಶಿವಳ್ಳಿ ಬ್ರಾಹ್ಮಣರು ತುಳು ಭಾಷೆಯನ್ನೂ, ದೇಶಸ್ಥರು ಮರಾಠಿ ಭಾಷೆಯನ್ನೂ, ಶ್ರೀವೈಷ್ಣವರು ತಮಿಳು ಭಾಷೆಯನ್ನೂ ಮಾತನಾಡುವವರಾದರೂ ಎಲ್ಲರೂ ಕನ್ನಡ ಬಲ್ಲವರಾಗಿದ್ದಾರೆ. ಕಾಶ್ಯಪ, ಭಾರದ್ವಾಜ, ವಿಶ್ವಾಮಿತ್ರ, ಹಾರೀತ, ಕೌಂಡಿನ್ಯ ಮೊದಲಾದ ಗೋತ್ರಗಳಿವೆ. ಒಂದೇ ಗೋತ್ರದವರು ದಾಯಾದಿಗಳೆಂಬ ಭಾವನೆ ಬಲವಾಗಿದ್ದು ವಿವಾಹ ಸಂಬಂಧ ಬೆಳೆಸುವುದಿಲ್ಲ. ಸ್ಮಾರ್ತರು ಶಿವನನ್ನೂ, ವೈಷ್ಣವರು ಹಾಗೂ ಶ್ರೀವೈಷ್ಣವರು ವಿಷ್ಣುವನ್ನೂ ಆರಾಧಿಸುವರು. ಸ್ಮಾರ್ತರಿಗೆ ಯುಗಾದಿ, ಗೌರಿಗಣಪತಿ, ಶಿವರಾತ್ರಿ ಇವು ಮುಖ್ಯವಾದ ಹಬ್ಬಗಳು. ಶಂಕರ ಜಯಂತಿಯನ್ನು ವಿಶೇಷವಾಗಿ ಆಚರಿಸುವರು. ಮಾಧ್ವರಿಗೆ ಎಲ್ಲಾ ಹಿಂದೂ ಹಬ್ಬಗಳೊಡನೆ ಮಾಧ್ವನವಮಿ, ರಾಘವೇಂದ್ರ ಸ್ವಾಮಿ ಆರಾಧನೆ ಮುಖ್ಯವಾದವು. ಅಯ್ಯಂಗಾರರು ಗೋಕುಲಾಷ್ಟಮಿ, ಕಾರ್ತೀಕ ಹಬ್ಬ, ಖನು ಹಬ್ಬಗಳನ್ನು ಆಚರಿಸುವರು. ಇವರು ಹುಟ್ಟಿನಿಂದ ಸಾವಿನವರೆಗಿನ ಎಲ್ಲಾ ಆಚಾರಗಳನ್ನು ವೈದಿಕ ಸಂಪ್ರದಾಯದಂತೆ ನಡೆಸುತ್ತಾರೆ.

**ಮಾದಿಗ :** ಆದಿಜಾಂಬವರು, ಎಡಗೈನವರು, ಪದ್ಮಜಾತಿಯವರು, ಮಾತಂಗರು, ಬೇಗಾರರು, ಪಂಚಮರು, ಚಮ್ಮಾರರು ಮೊದಲಾದ ಹೆಸರುಗಳಿಂದ ಇವರನ್ನು ಗುರುತಿಸಲಾಗುತ್ತದೆ. ಈ ಹಿಂದೆ ಚರ್ಮ ಹದ ಮಾಡುವುದು, ತಮಟೆ, ಪಾದರಕ್ಷೆ ಮುಂತಾದ ಚರ್ಮದ ಸಾಮಾಗ್ರಿಗಳನ್ನು ಸಿದ್ಧಪಡಿಸುವುದು ಇವರ ಸಾಂಪ್ರದಾಯಿಕ ಕಸುಬುಗಳಾಗಿದ್ದವು. ಇವರಲ್ಲಿ ಆಡುವ ಭಾಷೆಯ ಆಧಾರದ ಮೇಲೆ ಒಳ ಪ್ರಭೇದಗಳೂ ಉಂಟು. ಇವರಲ್ಲಿ ಬಿಲ್ಲು, ಚಿಮ್ಮುಲು, ಬಟ್ಟಲು, ಹಿಪ್ಪೆ, ಬೆಣ್ಣೆ, ಗೋಣಬ, ಗುಜ್ಜಲು, ಬೆಳ್ಳಿ, ಕಡಬ, ಚೀಲ, ಹಂಡೆ, ಹಟ್ಟಿ, ಹೆಗ್ಗಡೆ, ಹನುಮಂತ ಮುಂತಾದ ನೂರಾರು ಕುಲಗಳಿವೆ. ಒಂದೇ ಕುಲದವರಲ್ಲಿ ವಿವಾಹ ನಿಷಿದ್ಧ. ವಿವಾಹದ ಸಂದರ್ಭದಲ್ಲಿ ಮದುಮಕ್ಕಳಿಗೆ ಯಾವ ಪರಿಕರಗಳಲ್ಲಿ ಉಣ್ಣಲು ನೀಡುತ್ತಾರೆಂಬುವುದರ ಆಧಾರದ ಮೇಲೆ ತಣಿಗೆ ಬುವ್ವದವರು, ಮೊರದ ಬುವ್ವದವರು, ಹೆಡಿಗೆ ಬುವ್ವದವರು ಎಂಬ ಒಳ ಪ್ರಭೇದಗಳೂ ಇವೆ. ಮಾತಂಗಿ ಇವರ ಕುಲದೇವತೆಯಾಗಿದ್ದು, ಗುಡ್ಡಯ್ಯ, ದಾಸಯ್ಯರನ್ನು ಬಿಡುವ ಪರಂಪರೆ ಇವರಲ್ಲಿ ವ್ಯಾಪಕವಾಗಿದೆ. ಶರಣ ಹರಳಯ್ಯ, ಜಾಂಬವಂತ ಮುನಿಯವರನ್ನು ತಮ್ಮ ಕುಲದ ಮೂಲಪುರುಷರೆನ್ನುವ ಅಭಿಮಾನವಿದೆ. ಇವರು ಮಾದೇಶ್ವರನನ್ನು ತಮ್ಮ ಜಾತಿಯವನೇ ಎನ್ನುವುದುಂಟು. ತಮಟೆ ಇವರದೇ

ಆದ ವಿಶಿಷ್ಟ ವಾದ್ಯ. ಮೊದಲಿಗೆ ಗ್ರಾಮಗಳ ಪ್ರಮುಖ ವಿಷಯಗಳನ್ನು ತಮಟೆ ಬಡಿದು ಸುದ್ಧಿ ಸಾರುವುದು ಇವರ ಮುಖ್ಯ ಕರ್ತವ್ಯವಾಗಿರುತ್ತಿತ್ತು.

**ಮಾರ್ವಾಡಿ :** ರಾಜಾಸ್ಥಾನ ಹಾಗೂ ಗುಜರಾತಿನಿಂದ ಇಲ್ಲಿಗೆ ವಲಸೆ ಬಂದು ಗಿರವಿ ಅಂಗಡಿ, ಚಿನ್ನ, ಬೆಳ್ಳಿ, ಬಟ್ಟೆ, ದಿನಬಳಕೆಯ ಹಾಗೂ ಮತ್ತಿತ್ತರ ವಸ್ತುಗಳ ವ್ಯಾಪಾರವನ್ನು ಮಾಡುತ್ತಾ, ಜೀವನ ಸಾಗಿಸುತ್ತಿರುವ ಮಾರ್ವಾಡಿಗಳು ಮಹಾವೀರ ಜಯಂತಿ ಮತ್ತಿತರ ಜೈನಧರ್ಮ ಸಂಬಂಧಿ ಹಬ್ಬ ವ್ರತಗಳನ್ನು ಆಚರಿಸುವರು. ದೀಪಾವಳಿ ಹಬ್ಬವನ್ನು ಆದ್ದೂರಿಯಿಂದ ಆಚರಿಸಿ ತಮ್ಮ ಗಿರಾಕಿಗಳಿಗೆ ಸಿಹಿ ಹಂಚುವುದು ರೂಢಿ.

**ಮೇದ :** ಗವರಿಗ, ಗೌರಿಮಕ್ಕಳು, ಗೌರಿಮೇದರು ಎಂದೆಲ್ಲಾ ಕರೆಸಿಕೊಳ್ಳುವ ಇವರ ಮುಖ್ಯ ವೃತ್ತಿ ಬಿದಿರಿನಿಂದ ನಿತ್ಯೋಪಯೋಗಿ ಸಾಧನ ಸಲಕರಣೆಗಳನ್ನು ತಯಾರಿಸುವುದು. ತಮ್ಮ ಮೂಲ ಕಸುಬಿನ ಜೊತೆಗೆ ವ್ಯವಸಾಯ, ವ್ಯಾಪಾರ, ನೌಕರಿ, ಕೂಲಿ ಮೊದಲಾದವೂ ಇವರ ಇತರ ಕಸುಬುಗಳಾಗಿವೆ. ಗೌರಿಮೇದರು, ಬಂಡಿಕಾರ ಮೇದರು ಎಂಬ ಒಳಪಂಗಡಗಳೂ, ಹಲವಾರು ಕುಲಗಳೂ ಇವೆ. ಶಿವಶರಣ ಮೇದರ ಕ್ಯಾತಯ್ಯನನ್ನು ತಮ್ಮ ಕುಲದ ಮೂಲ ಪುರುಷನೆಂದೂ, ಅವನ ಕಾರಣದಿಂದ ತಾವೂ ವೀರಶೈವರಾಗಿದ್ದೇವೆಂದೂ ಪ್ರತಿಪಾದಿಸುವರು. ಸಾಮಾನ್ಯವಾಗಿ ಬ್ರಾಹ್ಮಣ ಪುರೋಹಿತರ ನೇತೃತ್ವದಲ್ಲಿ ಧಾರ್ಮಿಕ ಕಾರ್ಯ ನೆರವೇರಿಸುವರು. ಗುಡ್ಡಯ್ಯ ಹಾಗೂ ದಾಸಯ್ಯ ಬಿಡುವ ಪರಂಪರೆ ಇವರಲ್ಲಿಯೂ ಇದೆ. ಗುಡ್ಡರು ಮಾದೇಶ್ವರನಿಗಿಂತ ಸಿದ್ದಪ್ಪಾಜಿ, ರಾಚಪ್ಪಾಜಿಯವರಿಗೇ ಹೆಚ್ಚಾಗಿ ನಡೆದುಕೊಳ್ಳುತ್ತಾರೆ. ಗೌರಿ ಕುಲದವರಿಗೆ ಗೌರಿಹಬ್ಬ ಮುಖ್ಯವಾದ್ದುದ್ದು. ಆ ದಿನವೇ ಅವರು ತಮ್ಮ ಪೂರ್ವಿಕರಿಗೆ ಎಡೆ ಇಡುವರು. ಗೌರಿ ಹಬ್ಬದ ತಿಂಗಳಲ್ಲಿ ಇವರು ಮಾಂಸ ತಿನ್ನುವುದಿಲ್ಲ. ಉಳಿದೆಲ್ಲಾ ಹಬ್ಬಗಳನ್ನು ಇತರರ ಹಾಗೆ ಆಚರಿಸುವರು. ತಮ್ಮ ಕುಲದೇವತೆಯಾದ ಮಲ್ಲಮ್ಮನನ್ನು ಸಂಕ್ರಾಂತಿಯ ದಿನ ವಿಶೇಷವಾಗಿ ಪೂಜಿಸುವರು. ಆ ದಿನ ತಮ್ಮ ಕುಲಕಸುಬಿಗೆ ಬೇಕಾದ ಹೊಸ ಬಿದಿರನ್ನು ತಂದು ಪೂಜಿಸುವರು. ಇವರ ಮನೆ ಮಾತು ಕನ್ನಡವಾದರೂ ತೆಲುಗು ಬಲ್ಲವರಾಗಿದ್ದಾರೆ.

**ಮೊದಲಿಯಾರ್ :** ಮೊದಲಿಯಾರ್ ಎಂಬ ಪದ ಮೊದಲ ಅಂದರೆ ಜೇಷ್ಠ ಅಥವಾ ಮೊದಲು ಎಂಬ ಪದದಿಂದ ಬಂದಿದೆಯೆಂದು ಭಾವಿಸಲಾಗಿದೆ. ವ್ಯಾಪಾರ, ಕಟ್ಟಡಗಳನ್ನು ಕಟ್ಟುವ ಗುತ್ತಿಗೆದಾರ, ದಳ್ಳಾಳಿ, ನೌಕರಿ ಮುಂತಾದ ವೃತ್ತಿಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಮಾತೃ ಭಾಷೆ ತಮಿಳಾದರೂ ಕನ್ನಡ ಬಲ್ಲವರಾಗಿದ್ದಾರೆ. ಇವರಲ್ಲಿ ಜಾತಿ ಪಂಚಾಯಿತಿ ಅಸ್ತಿತ್ವದಲ್ಲಿದೆ. ಸಾಮಾನ್ಯವಾಗಿ ಮಾಂಸಾಹಾರಿಗಳಾದ ಇವರಲ್ಲಿ ಶೈವ ಹಾಗೂ ವೈಷ್ಣವ ಅನುಯಾಯಿಗಳಿರುವರು. ಇವರು ತಮ್ಮ ಧಾರ್ಮಿಕ ಕಾರ್ಯಗಳನ್ನು ಬ್ರಾಹ್ಮಣ ಪುರೋಹಿತರ ಮಾರ್ಗದರ್ಶನದಲ್ಲಿ ನಡೆಸುವರು. ಇವರಲ್ಲಿ ಸತ್ತವರನ್ನು ಹೂಳುವ ಇಲ್ಲವೇ ಸುಡುವ ಪದ್ಧತಿ ಉಂಟು.

**ಯಾದವ :** ಗೊಲ್ಲ, ಕೃಷ್ಣ ಗೊಲ್ಲ ಎಂದೂ ಕರೆಯಲ್ಪಡುವ ಇವರು ಒಂದು ಕಾಲದಲ್ಲಿ ಅಲೆಮಾರಿಗಳಾಗಿದ್ದು, ಪಶುಸಂಗೋಪನೆಯಲ್ಲಿ ನಿರತರಾಗಿದ್ದವರು. ಇವರಲ್ಲಿ ಯರ

ಅಥವಾ ಕಿತ್ತಾರಿ, ಪುನುಗು ಅಥವಾ ಕುಡಿ, ಪೈತಾಳಿ, ಕರ್ನೇ, ಪುನಿ ಅಥವಾ ಪುಜೆ, ಬೀಗಮುದ್ರೆ ಅಥವಾ ಬೊಕ್ಕಸ, ಕಂಚು, ರಾಚ, ಮುಷ್ಟಿ ಮುಂತಾದ ಉಪಪಂಗಡಗಳಿದ್ದು, ಒಂಟಿ ಚಪ್ಪರದವರು ಹಾಗೂ ರೆಂಡು ಚಪ್ಪರದವರು ಎಂಬ ಎರಡು ಮುಖ್ಯ ಪ್ರಬೇಧಗಳಿವೆ. ಇವರಲ್ಲಿ ಹಲವಾರು ಬೆಡಗುಗಳಿದ್ದು, ಕೃಷ್ಣ, ಮಾರಮ್ಮ, ಎಲ್ಲಮ್ಮ, ಗಂಗಮ್ಮ, ಮುಂತಾದ ದೇವಾನುದೇವತೆಗಳನ್ನು ಆರಾಧಿಸುತ್ತಾರೆ. ತೆರ ನೀಡುವ ಪದ್ಧತಿ ಇವರಲ್ಲಿದೆ. ಸತ್ತ ಬ್ರಹ್ಮಚಾರಿಗಳನ್ನು ಈರಗಾರರೆಂದು ಪರಿಗಣಿಸಿ, ಕುದುರೆಸವಾರರಂತೆ ಕೆತ್ತಿದ ವೀರಗಲ್ಲು ನಿಲ್ಲಿಸಿ, ವಿಶೇಷ ದಿನಗಳಲ್ಲಿ ಪೂಜಿಸಲಾಗುತ್ತದೆ. ಸಂಕ್ರಾಂತಿ ಹಬ್ಬದಂದು ಕಾಟಮರಾಯನನ್ನು ಪೂಜಿಸುವ ಇವರಲ್ಲಿ ದೇವರಿಗೆ ದಾಸಯ್ಯಗಳನ್ನು ಬಿಡುವ ಸಂಪ್ರದಾಯವಿದೆ. ಇವರಲ್ಲಿ ಒಳಜಗಳ ತೀರ್ಮಾನಿಸಲು ಕಟ್ಟೇಮನೆಗಳಿದ್ದು, ಸತ್ತವರನ್ನು ಸಾಮಾನ್ಯವಾಗಿ ಹೂಳಲಾಗುತ್ತದೆ.

**ಲಿಂಗಾಯಿತ :** ಶಿವಾಚಾರದವರು, ಲಿಂಗವಂತರು, ಲಿಂಗಧಾರಿಗಳು, ವೀರಶೈವರು ಮುಂತಾದ ಹೆಸರುಗಳಿಂದ ಕರೆಯಲ್ಪಡುವ ಇವರಲ್ಲಿ ಜಂಗಮರು, ಬಣಜಿಗಶೆಟ್ಟಿ, ಆರಾಧ್ಯ, ಸಾದ, ನೊಣಬ, ಲಿಂಗಾಯ್ತ, ತಮ್ಮಡಿ, ಬಳೆಗಾರ, ಲಿಂಗಾಯ್ತಗೌಡ, ಪಂಚಪೀಠ, ಪಂಚಮಶೀಲ, ಶೀಲವಂತ, ಕಾವಾಡಿಗ, ಧೂಳ್ಪಾವಡದವರು ಮುಂತಾದ ಒಳ ಪ್ರಭೇದಗಳಿವೆ. ಇವರು ಕನ್ನಡ ಭಾಷಿಕರಾಗಿದ್ದು, ಕೃಷಿ, ವ್ಯಾಪಾರ, ವಾಣಿಜ್ಯ, ನೌಕರಿ ಮೊದಲಾದ ವೃತ್ತಿಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಬಸವೇಶ್ವರರು ಬೋಧಿಸಿದ ಸಿದ್ಧಾಂತಕ್ಕೆ ಶಕ್ತಿ ವಿಶಿಷ್ಟಾದ್ವೈತ ಎಂದು ಕರೆಯಲಾಗಿದೆ. ಚಿಕ್ಕಮಗಳೂರು ಜಿಲ್ಲೆಯ ಬಾಳೆ ಹೊನ್ನೂರು, ಬಳ್ಳಾರಿಯ ಉಜ್ಜನಿ, ಉತ್ತರ ಪ್ರದೇಶದ ಕೇದಾರ ಹಾಗೂ ಕಾಶಿ, ಆಂಧ್ರ ಪ್ರದೇಶದ ಶ್ರೀಶೈಲ ಇವರ ಪಂಚ ಪೀಠಗಳಾಗಿವೆ. ಅಷ್ಟಾವರಣ, ಪಂಚಾಚಾರ ಹಾಗೂ ಷಟ್‌ಸ್ಥಲಗಳೂ ಇವರ ಆಚರಣೆಯ ಪ್ರಮುಖ ಧಾರ್ಮಿಕ ಲಕ್ಷಣಗಳಾಗಿದ್ದು ಅವು ಇವರ ಧಾರ್ಮಿಕತೆಯ ವಿಶೇಷತೆಯನ್ನು ಬಿಂಬಿಸುತ್ತವೆ. ಷಟ್‌ಸ್ಥಲಗಳು ಲೌಕಿಕದಿಂದ ಪಾರಮಾರ್ಥಿಯತ್ತ ಕೊಂಡೊಯ್ಯುವ ವಿವಿಧ ಆಧ್ಯಾತ್ಮಿಕ ಹಂತಗಳೆಂದು ಪರಿಗಣಿಸಲಾಗಿದೆ. ಸಸ್ಯಾಹಾರಿಗಳಾದ ಇವರು ಸಾಮಾನ್ಯವಾಗಿ ಏಕದೇವೋಪಾಸಕರಾಗಿದ್ದು ಇಷ್ಟಲಿಂಗಧಾರಿಗಳಾಗಿದ್ದು, ಪರಿಶುದ್ಧರೆಂದು ಪರಿಗಣಿಸಲಾಗುತ್ತದೆ. ಜಂಗಮರು, ವಿರಕ್ತರು ಗುರುವರ್ಗಕ್ಕೆ ಸೇರಿದ್ದು, ಸಂಸಾರವನ್ನು ತ್ಯಜಿಸಿ ಸಾಮಾನ್ಯವಾಗಿ ಮಠಗಳಲ್ಲಿ ಜೀವಿಸುವರು. ವಿವಾಹ ಸಂದರ್ಭಗಳಲ್ಲಿ ಹೋಮದ ಬದಲಿಗೆ ಪಂಚಕಳಸಗಳನ್ನು ಪೂಜಿಸಿ, ಗುಗ್ಗಳಸೇವೆ ಮಾಡಿ ಲಿಂಗಧೀರರನ್ನು ಕರೆಸುತ್ತಾರೆ. ಸತ್ತವರನ್ನು ಸಾಧಾರಣವಾಗಿ ಇಷ್ಟಲಿಂಗದೊಡನೆ ಹೂಳುತ್ತಾರಾದರೂ ದುರ್ಮರಣ ಮುಂತಾದ ಸಂದರ್ಭಗಳಲ್ಲಿ ಸುಡುವರು.

**ವಡ್ಡ :** ಮೈಸೂರು ತಾಲೂಕಿನಲ್ಲಿ ಇವರನ್ನು ಬೋವಿ, ಕಲ್ಲುಕುಟಿಗ ಮುಂತಾದ ಹೆಸರುಗಳಿಂದ ಕರೆಯುವರು. ಒಡ್ಡ ಎಂಬುದು ವೃತ್ತಿ ಸೂಚಕ ಪದ. ಸಾಮಾನ್ಯವಾಗಿ ನೀರು ಹರಿಯುವ ಹಳ್ಳ, ಕೊಳ್ಳಗಳಿಗೆ ಅಡ್ಡಲಾಗಿ ಮಣ್ಣಿನ ಅಡೆತಡೆಯನ್ನು ನಿರ್ಮಿಸುವುದಕ್ಕೆ ಒಡ್ಡು ಎಂದು ಕರೆಯುವುದು ರೂಢಿ. ಇದನ್ನು ನಿರ್ಮಿಸುವವರನ್ನು ವಡ್ಡರು ಎಂದು

ಕರೆದಿರಬಹುದು. ವಡ್ಡ ಸ್ತ್ರೀ ಪುರುಷರು ಸದೃಢ ಶರೀರಿಗಳು. ಬಹು ಪುರಾತನ ಲಕ್ಷಣಗಳನ್ನು ಹೊಂದಿರುವ ಇವರು ಮೂಲತಃ ಒಡಿಸ್ಸಾದವರು. ಅಲ್ಲಿಂದಲೇ ಇವರು ಬೇರೆ ಬೇರೆ ಉದ್ಯೋಗಗಳನ್ನು ಹುಡುಕುತ್ತಾ ಭಾರತದ ಹಲವಾರು ಕಡೆಗಳಲ್ಲಿ ವಲಸೆ ಹೋಗಿ ನೆಲೆಸಿರುವಂತೆ ಮೊದಲು ಆಂಧ್ರ ಪ್ರದೇಶಕ್ಕೆ ಬಂದು, ಅಲ್ಲಿ ಕೆಲಕಾಲ ನೆಲೆಸಿ ಕ್ರಮೇಣವಾಗಿ ಹೈದರಾಬಾದಿನ ಗಡಿ ಮೂಲಕ ರಾಯಚೂರು, ಬಳ್ಳಾರಿ, ಗುಲ್ಬರ್ಗಾ ಜಿಲ್ಲೆಗಳಲ್ಲಿ ಗುಂಪು ಗುಂಪಾಗಿ ಬಂದು ನೆಲೆಯೂರಿದರೆಂಬ ಅಭಿಪ್ರಾಯವಿದೆ. ಕ್ರಮೇಣ ತಮ್ಮ ಕುಲಕಸುಬಾದ ಕಲ್ಲು ಒಡೆಯುವುದನ್ನು ಮುಂದುವರೆಸಿ, ಇತರೆಡೆಗಳಲ್ಲೂ ನೆಲೆಸಿದಂತೆ ತೋರುತ್ತದೆ. 'ವಡ್ಡರು' ಎಂಬುವರು ಮೂಲತಃ ಒಂದೇ ಜಾತಿಯಾಗಿದ್ದು ಕಾಲ ಕಳೆದಂತೆ ಒಂದೊಂದು ಕುಟುಂಬದವರು ಒಂದೊಂದು ವಿಶಿಷ್ಟ ವೃತ್ತಿಯನ್ನು ಮಾಡುತ್ತ ಬಂದಿರುವುದರಿಂದ ಮಣ್ಣು ಒಡ್ಡರು, ಬಂಡಿ ಒಡ್ಡರು, ಉಪ್ಪು ಒಡ್ಡರು, ಗಿರಣಿ ಒಡ್ಡರು, ಬೈಲು ಒಡ್ಡರು ಮುಂತಾದ ಒಳ ಪಂಗಡಗಳಾಗಿವೆ. ಇವರಲ್ಲಿ ಜಾತಿ ಪಂಚಾಯಿತಿ ಇದೆ. ಮನೆಮಾತು ತೆಲುಗಾದರೂ ಕನ್ನಡ ಓದಲು, ಬರೆಯಲು ಬಲ್ಲವರಾಗಿದ್ದಾರೆ. ತೆರ ಪದ್ಧತಿ, ವಿಧವಾವಿವಾಹ, ವಿಚ್ಛೇದನಗಳು ಆಚರಣೆಯಲ್ಲಿವೆ. ಮಾಂಸಾಹಾರಿಗಳಾದ ಇವರು ತಿರುಪತಿಯ ವೆಂಕಟರಮಣವನ್ನು ವಿಶೇಷವಾಗಿ ಆರಾಧಿಸುವುದರ ಜೊತೆ ಇತರ ದೇವರುಗಳನ್ನೂ ಪೂಜಿಸುವರು. ಇವರಲ್ಲಿ ಸತ್ತವರನ್ನು ಹೂಳುವ ಪದ್ಧತಿ ರೂಢಿಯಲ್ಲಿದೆ.

**ವಿಶ್ವಕರ್ಮ** : ಚಿನ್ನ, ಕಂಚು, ಕಬ್ಬಿಣ, ಕಲ್ಲು, ಮರ ಈ ಐದೂ ರೀತಿಯ ಸಾಮಗ್ರಿಗಳನ್ನು ಬಳಸಿಕೊಂಡು ಕೆಲಸ ಮಾಡುವ ಅಕ್ಕಸಾಲಿಗ, ಕಂಚುಗಾರ, ಕಮ್ಮಾರ, ಬಡಗಿ, ಶಿಲ್ಪಿ ಈ ಐದು ಕಸುಬುಗಳನ್ನು ಕೈಗೊಂಡವರನ್ನು ಅಕ್ಕಸಾಲಿಗರು, ಆಚಾರರು, ಪಾಂಚಾಳರೆಂದೂ ಕರೆಯುವರು. ಪಾಂಚಾಳರು ಅಥವಾ ವಿಶ್ವಕರ್ಮರು ಎಂಬ ನಾಮಾಂಕಿತಗಳಿಂದ ಕರೆಯುವರು. ವಿಶ್ವಬ್ರಹ್ಮ ಇವರ ಪ್ರಧಾನ ಆರಾಧ್ಯ ದೇವತೆ ಹಾಗೂ ಕಾಳಿಕಾದೇವಿ ಇವರ ಕುಲದೇವತೆ. ಕಾಳಿಮಾತೆ ಅಗ್ಗಿಷ್ಟಿಕೆಯಲ್ಲಿಯೇ ನೆಲೆಸಿರುತ್ತಾಳೆಂಬ ಪೂಜ್ಯ ಭಾವನೆಯಿಂದ ಪ್ರತೀದಿನ ಇದಕ್ಕೆ ಪೂಜೆ ಮಾಡಿಯೇ ಕೆಲಸ ಪ್ರಾರಂಭಿಸುವರು. ವಿಶ್ವಕರ್ಮ ಬ್ರಾಹ್ಮಣ ಎಂಬ ಹೆಸರೂ ಇವರಿಗೆ ಇದ್ದು, ಜನಿವಾರ ಧಾರಣೆಯೇ ಮೊದಲಾದ ಇವರ ಆಚಾರ-ವಿಚಾರಗಳಲ್ಲಿ, ವೈದಿಕ ಸಂಪ್ರದಾಯದ ಪ್ರಭಾವ ಕಂಡುಬರುತ್ತದೆ. ಇವರು ಸಿದ್ಧಪ್ಪಾಜಿ ಪ್ರಭಾವಕ್ಕೆ ಒಳಗಾಗಿ ಕಪ್ಪಡಿ, ಚಿಕ್ಕಾಲ್ಲೂರು, ಬೊಪ್ಪಗೌಡನಪುರ ಮುಂತಾದ ಕ್ಷೇತ್ರಗಳಿಗೆ ನಡೆದುಕೊಳ್ಳುತ್ತಾರೆ. ಇವರಲ್ಲಿ ಮಾಂಸಹಾರವನ್ನು ಸೇವಿಸುವವರೂ ಇದ್ದಾರೆ. ಇವರಲ್ಲಿಯೇ ವೀರಶೈವ ಪ್ರಭಾವಕ್ಕೆ ಒಳಗಾಗಿರುವ ಲಿಂಗಾಯ್ತ ಆಚಾರರು ಎಂದು ಕರೆದುಕೊಳ್ಳುವ ಮತ್ತೊಂದು ಪ್ರಭೇದವನ್ನೂ ಕಾಣಬಹುದು. ಇವರು ಬಸವಣ್ಣನವರ ಕಾಲದಲ್ಲಿ ಲಿಂಗದೀಕ್ಷೆ ತೆಗೆದುಕೊಂಡವರೆಂದು ಹೇಳುವುದುಂಟು. ಸಸ್ಯಾಹಾರಿಗಳಾದ ಇವರು ವಿಶ್ವಕರ್ಮರೊಂದಿಗೆ ವೈವಾಹಿಕ ಸಂಬಂಧ ಮಾಡುವ ರೂಢಿ ಇಲ್ಲ. ವಿಶ್ವಕರ್ಮರಲ್ಲಿ ಸತ್ತವರನ್ನು ಸುಡುವ ಪದ್ಧತಿ ಇದೆ.

**ವೈಶ್ಯ :** ಶೆಟ್ಟಿ, ಕೋಮಟಿ, ಶ್ರೇಷ್ಠಿ, ಗುಪ್ತ, ಆರ್ಯವೈಶ್ಯ ಮೊದಲಾದ ಹೆಸರುಗಳಿಂದ ಈ ತಾಲೂಕಿನಲ್ಲಿ ಕರೆಯಲಾಗುವ ಇವರ ಮೂಲ ಕಸುಬು ವ್ಯಾಪಾರ–ವಾಣಿಜ್ಯಗಳಾಗಿದ್ದು, ಈಚೆಗೆ ಇವರು ಬೇರೆ ಬೇರೆ ಕ್ಷೇತ್ರಗಳಲ್ಲೂ ತೊಡಗಿದ್ದಾರೆ. ಇವರ ಮನೆ ಮಾತು ತೆಲುಗಾದರೂ ಕನ್ನಡ ಬಲ್ಲವರಾಗಿದ್ದಾರೆ. ಎಲ್ಲಾ ಸಂಪ್ರದಾಯಾಚರಣೆಗಳಲ್ಲೂ ಬ್ರಾಹ್ಮಣರನ್ನೇ ಹೋಲುವ ಇವರಲ್ಲೂ ಗೋತ್ರಕ್ಕೆ ಪ್ರಾಧಾನ್ಯತೆ ಇದೆ. ಕಾಶ್ಯಪ, ಪೈಡಕುಲ, ಮೂಲಕುಲ, ಮಿಥುನಕುಲ ಮುಂತಾದ ಗೋತ್ರಗಳಿವೆ. ಗಂಡು ಮಗುವಿಗೆ ಉಪನಯನವನ್ನು ಎಂಟನೇ ವರ್ಷದ ಆನಂತರ ಮಾಡಬೇಕೆಂದು ವಿಧಿ ಇದ್ದರೂ ಇತ್ತೀಚೆಗೆ ಮದುವೆಯ ಹಿಂದಿನ ದಿನ ನಡೆಸುವುದು ರೂಢಿಗತವಾಗಿದೆ. ಜನಿವಾರ ಧರಿಸುವ ಶಾಖಾಹಾರಿಗಳಾದ ಇವರ ಧಾರ್ಮಿಕ ಕಾರ್ಯಗಳನ್ನು ಬ್ರಾಹ್ಮಣ ಪುರೋಹಿತರು ನೆರವೇರಿಸುವರು. ಕನ್ನಿಕಾಪರಮೇಶ್ವರಿ ಇವರ ಕುಲದೇವತೆ. ಬಿಳಿಗಿರಿರಂಗನಾಥ, ನಂಜುಂಡೇಶ್ವರ, ಚೆಲುವನಾರಾಯಣ, ವೆಂಕಟೇಶ್ವರ ಮುಂತಾದವು ಇವರ ಮನೆ ದೇವರುಗಳಾಗಿವೆ. ವಾಸವಿ ಜಯಂತಿ ಇವರಿಗೆ ಪ್ರಮುಖವಾದ ಹಬ್ಬ.

**ಹೊಲೆಯ :** ಆದಿಕರ್ನಾಟಕರು, ಹರಿಜನರು, ಬಲಗೈನವರು, ದಲಿತರು, ಪಂಚಮರು, ಅಂತ್ಯಜರು ಮೊದಲಾದ ಹೆಸರುಗಳಿಂದ ಇವರನ್ನು ಕರೆಯಲಾಗುತ್ತದೆ. ಇವರಲ್ಲಿ ಅನೇಕ ಒಳ ಪ್ರಭೇದಗಳಿವೆ. ಅತ್ತಿಕುಲ, ಚಿನ್ನಕುಲ, ಜಿಂತಾಕುಕುಲ, ಗುಡಿಕುಲ, ಗಾಣಿಗರಕುಲ, ಹುಟ್ಟಿನಕುಲ, ಹುತ್ತದಕುಲ, ಹಾರೆಕುಲ, ಹಣಕುಲ, ಹಾಗಲಕುಲ, ಸಿಡಿಲುಕುಲ ಮುಂತಾದ ಕುಲಗಳಿವೆ. ಜೊತೆಗೆ ಹನ್ನೆರಡು ಬಣದವರು, ಹದಿನಾರು ಬಣದವರು, ಹದಿನೆಂಟು ಬಣದವರೆಂದು ಹೇಳುವ ಮತ್ತೊಂದು ಬಗೆಯನ್ನು ಗುರುತಿಸಬಹುದು. ವಿಧವಾವಿವಾಹ, ವಿಚ್ಛೇದನಕ್ಕೆ ಪ್ರೋತ್ಸಾಹವಿದೆ. ಯಜಮಾನ ಹಾಗೂ ಕುಲಸ್ಥರ ಸಮ್ಮುಖದಲ್ಲಿ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಡುವರು. ಮಾದೇಶ್ವರನ ಗುಡ್ಡರು, ವೆಂಕಟರಮಣ ಅಥವಾ ಚೆಲುವರಾಯನ ದಾಸರು ಇವರಲ್ಲಿ ಹೆಚ್ಚು ಸಂಖ್ಯೆಯಲ್ಲಿದ್ದಾರೆ. ಯುಗಾದಿಯಿಂದ ಶಿವರಾತ್ರಿಯವರೆಗಿನ ಎಲ್ಲಾ ಹಿಂದೂ ಹಬ್ಬಗಳನ್ನು ಆಚರಿಸುವುದರ ಜೊತೆಗೆ ಮುಖ್ಯ ಹಬ್ಬಗಳಲ್ಲಿ ಪೂರ್ವಿಕರಿಗೆ ಎಡೆ ಇಡುವರು.

**ಕ್ರೈಸ್ತಿಯನ್ನರು :** ಏಸುಕ್ರಿಸ್ತನನ್ನು ಪರದೈವವೆಂದು ಪೂಜಿಸುವ ಇವರಿಗೆ ಬೈಬಲ್ ಪರಮ ಪವಿತ್ರ ಗ್ರಂಥವೆನಿಸಿದೆ. ಸಪ್ತ ಸಂಸ್ಕಾರಗಳಿಗೆ ಇವರ ಜೀವನದಲ್ಲಿ ಪ್ರಾಮುಖ್ಯತೆ ಇದೆ. ಜ್ಞಾನ ಸ್ನಾನ, ಭದ್ರಾಭ್ಯಂಗ ಅಥವಾ ದೃಢೀಕರಣ, ಪರಮ ಪವಿತ್ರ ಪ್ರಸಾದ, ಪ್ರಾಯಶ್ಚಿತ, ಅಂತಿಮ ಅಭ್ಯಂಗ, ಪುರೋಹಿತಾಭಿಷೇಕ, ಜ್ಞಾನವಿವಾಹ ಈ ಏಳು ಸಂಸ್ಕಾರಗಳನ್ನು, ಕೆಲವು ಉಪಸಂಸ್ಕಾರಗಳನ್ನು ರೂಢಿಸಿಕೊಂಡಿದೆ. ಇವರಲ್ಲಿ ವಿವಾಹಕ್ಕೆ ಮುಂಚಿತವಾಗಿ ಮಾಡುವ ನಿಶ್ಚಿತಾರ್ಥಕ್ಕೆ ಹೆಚ್ಚಿನ ಪ್ರಾಧಾನ್ಯತೆ ಇದೆ. ಇಲ್ಲಿನ ಹೆಚ್ಚಿನ ಕ್ರೈಸ್ತರು ಮತಾಂತರಗೊಂಡ ಹಿಂದೂಗಳೇ ಆಗಿರುವುದರಿಂದ ಮೂಲ ಕುಲಗಳ, ಸಂಪ್ರದಾಯಗಳ ಪಳೆಯುಳಿಕೆಗಳೂ ಗೋಚರವಾಗುತ್ತವೆ. ಅವುಗಳಲ್ಲಿ ಶಿಲುಬೆಯ ದಾರಿ, ಚರ್ಚ್‌ಗೆ ಆಗಮನ, ಪವಿತ್ರೋದಕ, ಪಾಮ್‌ಸಂಡೆ, ಸೇಕ್ರೆಡ್‌ಆ್ಯಶ್, ಮುಂತಾದವುಗಳನ್ನು ಗಮನಿಸಬಹುದು. ಇವರ ಎಲ್ಲಾ ಆಚರಣೆಗಳಲ್ಲೂ ಸಾಮೂಹಿಕ ಪ್ರಾರ್ಥನೆ

ಮುಖ್ಯವಾಗಿರುತ್ತದೆ. ಕ್ರಿಸ್‌ಮಸ್, ಈಸ್ಟರ್, ಗುಡ್‌ಫ್ರೈಡೆ, ಹೋಲಿ ಸಾಟರ್ ಡೇ ಮುಂತಾದ ದಿನಗಳನ್ನು ಮುಖ್ಯವಾಗಿ ಆಚರಿಸುವರು. ಈ ಹಬ್ಬಗಳೆಲ್ಲಾ ಏಸು ಕ್ರಿಸ್ತನೊಡನೆ ಸಂಬಂಧ ಪಡೆದಿರುವುದು ಗಮನಾರ್ಹ ಅಂಶ. ಸತ್ತವರನ್ನು ಅವರ ಮದುವೆ ಸಂದರ್ಭದ ಬಟ್ಟೆ ತೊಡಿಸಿ ಶವ ಪೆಟ್ಟಿಗೆಯಲ್ಲಿಟ್ಟು ಹೂಳುವ ಪದ್ಧತಿಯುಂಟು.

**ಮುಸ್ಲಿಮರು :** ಅಲ್ಲಾ, ಖುರಾನ್ ಹಾಗೂ ಮೊಹಮ್ಮದ್ ಪೈಗಂಬರ್ ಈ ಮೂರಕ್ಕೆ ವಿಶೇಷ ಗೌರವ ಸಲ್ಲಿಸುವ ಮುಸ್ಲಿಮರಲ್ಲಿ ಷಿಯಾ, ಸುನ್ನಿ, ಷೇಕ್, ಸಯ್ಯದ್ ಲಬ್ಬೆ ಮುಂತಾದ ಒಳ ಪಂಗಡಗಳಿವೆ. ವ್ಯಾಪಾರ, ವಾಣಿಜ್ಯ, ಕೃಷಿ ಮತ್ತಿತ್ತರ ಕಸುಬುಗಳಲ್ಲಿ ತೊಡಗಿಸಿಕೊಂಡಿದ್ದಾರೆ. ವಿವಾಹ ಕಾಲದಲ್ಲಿ ವರ ಮದುಮಗಳಿಗೆ ಮೆಹರ್ ಕೊಡಬೇಕೆಂಬ ನಿಯಮವಿದೆ. ತಮ್ಮ ಜೀವನದಲ್ಲಿ ಅತ್ಯಂತ ಮುಖ್ಯವಾದ ಐದು ವಿಧಿಗಳನ್ನು (ಫರ್ಜ್) ಶ್ರದ್ಧೆಯಿಂದ ಆಚರಿಸುತ್ತಾರೆ. ಹಜ್ ಯಾತ್ರೆ ಪ್ರತಿಯೊಬ್ಬ ಮುಸ್ಲಿಮನ ಬಯಕೆಯಾಗಿರುತ್ತದೆ. ಮೊಹರಂ, ಈದ್ ಮಿಲಾದ್, ಸಫರ್, ದಸ್ತೆಗೀರ್, ಷಬ್ಬೆ ಮೇರಾಜ್, ಷಬ್ಬೆ ಬರಾತ್, ರಂಜಾನ್, ಬಕ್ರಿದ್ ಇವು ಮುಖ್ಯ ಹಬ್ಬಗಳಾದರೂ ರಂಜಾನ್ ಮತ್ತು ಬಕ್ರಿದ್‌ಗಳನ್ನು ವಿಶೇಷ ಕಾಳಜಿಯಿಂದ ಆಚರಿಸುವರು. ಸತ್ತವರನ್ನು ಹೂಳುವುದು ಪದ್ಧತಿಯಾಗಿದೆ.

## ಸಾಮಾಜಿಕ ಜೀವನ

ಮೈಸೂರು ತಾಲೂಕಿನಲ್ಲಿ ಅವಿಭಕ್ತ ಕುಟುಂಬ ವ್ಯವಸ್ಥೆ ಅನೂಚಾನವಾಗಿ ನಡೆದು ಬಂದಿದೆಯಾದರೂ ಇತ್ತೀಚೆಗೆ ಹಲವಾರು ಕಾರಣಗಳಿಂದಾಗಿ ಇಂತಹ ಕುಟುಂಬ ವ್ಯವಸ್ಥೆ ಕಡಿಮೆಯಾಗುತ್ತಿವೆ. ಸಾರಿಗೆ ಸಂಪರ್ಕ, ವಿದ್ಯಾಭ್ಯಾಸ, ವ್ಯಾಪಾರ, ವಾಣಿಜ್ಯ, ಕೈಗಾರಿಕೆಗಳ ಬೆಳವಣಿಗೆ ಮುಂತಾದವು ನೂತನ ನಾಗರಿಕ ಜೀವನಕ್ಕೆ ಎಡೆಮಾಡಿವೆ. ನಗರಗಳಲ್ಲಿ ಬದಲಾಗುತ್ತಿರುವ ಸಾಮಾಜಿಕ ಆರ್ಥಿಕ ಕ್ಷೇತ್ರಗಳಲ್ಲೂ ಹಲವಾರು ಬದಲಾವಣೆಗಳಾಗುತ್ತಿವೆ. ಎಲ್ಲಾ ಧರ್ಮಗಳಲ್ಲೂ ಹುಟ್ಟಿನಿಂದ ಸಾವಿನವರೆಗೆ ಅನೇಕ ಸಂಪ್ರದಾಯಾಚರಣೆಗಳಿರುವುದನ್ನು ಕಾಣಬಹುದು. ಸಾಮಾನ್ಯವಾಗಿ ಎಲ್ಲಾ ಕುಟುಂಬಗಳ ಹೊಸ ಸದಸ್ಯರ ಆಗಮನವನ್ನು ಅತ್ಯಂತ ಸಂತಸದಿಂದ ಸ್ವಾಗತಿಸುತ್ತವೆ. ಚೊಚ್ಚಲು ಹೆರಿಗೆಗೆ ಮುಂಚೆ ಬಸುರಿಗೆ ಗಂಡನ ಮನೆಯಲ್ಲಿ ಸೀಮಂತ ಶಾಸ್ತ್ರವನ್ನು ಮಾಡುವುದುಂಟು. ಸೊಸೆಗೆ ಹೊಸ ಹಸಿರು ಸೀರೆ, ರವಿಕೆ ಉಡಿಸಿ ಹಸಿರು ಬಳೆಗಳನ್ನು ತೊಡಿಸಿ ಮುತ್ತೈದೆಯರಿಂದ ಶಾಸ್ತ್ರ ಮಾಡಿಸಿ ಭಕ್ಷ ಭೋಜನ ನೀಡಿ ತವರು ಮನೆಗೆ ಬೀಳ್ಕೊಡುವರು. ಮಗುವಿನ ಜನನ ಆದ ತಕ್ಷಣ ಮನೆಯಲ್ಲಿ ಸೂತಕ ಆಚರಿಸುವರು. ಸಾಮಾನ್ಯವಾಗಿ ಹನ್ನೆರಡನೆ ದಿನಕ್ಕೆ ಬಾಣಂತಿ ಮಗು ಸೇರಿದಂತೆ ಮನೆ ಮಂದಿ ಸ್ನಾನ ಮಾಡಿ ಸೂತಕ ಕಳೆದುಕೊಳ್ಳುವರು. ಕೆಲವರು ಆ ದಿನವೇ ನಾಮಕರಣ ಶಾಸ್ತ್ರ ಅಥವಾ ತೊಟ್ಟಿಲು ಶಾಸ್ತ್ರ ನಡೆಸುವುದುಂಟು.

ಲಿಂಗಾಯಿತರಲ್ಲಿ ಹನ್ನೆರಡನೆಯ ದಿನದವರೆಗೆ ಸೂತಕದ ಕಟ್ಟುನಿಟ್ಟಿಲ್ಲವಾದರೂ ಅಮಂಗಳ ಎಂಬ ಭಾವನೆ ಇರುತ್ತದೆ. ಹನ್ನೆರಡನೆಯ ದಿನ ಜಂಗಮರನ್ನು ಕರೆದು ಅವರಿಂದ ಮಗುವಿನ ಕಿವಿಯಲ್ಲಿ ಮಂತ್ರೋಪದೇಶ, ವಿಭೂತಿ ಧಾರಣೆ ಹಾಗೂ

ಲಿಂಗಧಾರಣೆಯನ್ನೂ ಮಾಡಿಸುತ್ತಾರೆ. ಆನಂತರ ಮಗುವಿಗೆ ವರ್ಷ ತುಂಬುವುದರೊಳಗೆ ಮುಡಿ ತೆಗೆಸುವ ಕಾರ್ಯವನ್ನು ನಡೆಸುವರು. ಜೈನರು, ಬ್ರಾಹ್ಮಣರು, ವೈಧಿಕ ಧರ್ಮವನ್ನಾಚರಿಸುವ ಇತರ ಜಾತಿಗಳಲ್ಲಿ ಗಂಡು ಮಕ್ಕಳಿಗೆ ಉಪನಯನವನ್ನು ಮಾಡುವರು.

ಮುಸಲ್ಮಾನರಲ್ಲೂ ಮಗು ಹುಟ್ಟಿದ ಕೂಡಲೆ ಕಿವಿಯಲ್ಲಿ ಅಜಾನ್ ಹೇಳಿ ನಾಮಕರಣ ಮಾಡುತ್ತಾರಾದರೂ ಆನಂತರದಲ್ಲಿ ಹೆಸರು ಬದಲಾಯಿಸಿಕೊಳ್ಳಲು ಅನುಮತಿ ಇರುತ್ತದೆ. ಕರ್ಜೂರವನ್ನು ಜೇನುತುಪ್ಪದಲ್ಲಿ ಅದ್ದಿ ಮಗುವಿನ ಬಾಯಿಗಿಡುವರು. ಮಗು ಹುಟ್ಟಿದ ಐದು ಅಥವಾ ಆರನೆಯ ದಿನ ಮಗುವಿಗೆ ಹೊಸವಸ್ತ್ರ ತೊಡಿಸಿ ಕಾಕದೃಷ್ಠಿ ಆಗದಿರಲೆಂದು ಶಾಸ್ತ್ರವನ್ನಾಚರಿಸುವರು (ಹಖೀಬ). ಕ್ರೈಸ್ತರಲ್ಲೂ ಮಗು ಜನಿಸಿದ ಒಂದು ತಿಂಗಳೊಳಗೆ ಬಿಳಿ ಹೊಸ ಉಡುಪು ಧರಿಸಿ ಚರ್ಚಿನಲ್ಲಿ ಧರ್ಮ ಗುರುಗಳು ಹಾಗೂ ಬಂಧು ಬಳಗದವರ ಸಮ್ಮುಖದಲ್ಲಿ ನಾಮಕರಣ ಶಾಸ್ತ್ರ ನಡೆಸುವರು.

ಹೆಣ್ಣು ಮಕ್ಕಳ ಜೀವನದಲ್ಲಿ ಋತುಮತಿಯಾಗುವುದು ಮುಖ್ಯ ಘಟನೆ. ಹೆಣ್ಣು ಮೊದಲ ಸಲ ಮುಟ್ಟಾಗುವುದನ್ನು ಮೈನೆರೆದಳೆಂದು ಹೇಳುವರು. ವಿಷಯ ತಿಳಿದ ಕೂಡಲೆ ಸ್ನಾನ ಮಾಡಿಸಿ ಹಾಲು ಕುಡಿಸುವರು. ಹಿರಿಯರು ಪುರೋಹಿತರ ಬಳಿ ಶಾಸ್ತ್ರ ಕೇಳಿ ಸೊಪ್ಪಾಕುವ (ಗುಡ್ಲು ಕೂಡುವ) ಶಾಸ್ತ್ರವನ್ನು ಸೋದರ ಮಾವ ಹಾಗೂ ಬಂಧು ಬಳಗದವರ ನೇತೃತ್ವದಲ್ಲಿ ನಡೆಸುವರು. ಅಂದಿನಿಂದ ಸುಮಾರು ಒಂದು ತಿಂಗಳವರೆಗೆ ಸೂತಕ ಆಚರಿಸುವರು. ಆನಂತರ ತಮ್ಮ ಮನೆ ದೇವರ ದಾಸಯ್ಯ, ಗುಡ್ಡಯ್ಯರನ್ನು ಆಹ್ವಾನಿಸಿ ಸೂತಕ ಕಳೆದುಕೊಳ್ಳುವರು. ಆದರೆ ಇತ್ತೀಚೆಗೆ ಗುಡ್ಲು ಕೂಡುವ ಶಾಸ್ತ್ರವು ಕಣ್ಮರೆಯಾಗುತ್ತಿದೆ.

ತಾಲೂಕಿನಾದ್ಯಾಂತ ಧಾರ್ಮಿಕ ಹಿನ್ನೆಲೆಯಿಂದ ಹಲವಾರು ಜನಪದ ಸಂಪ್ರದಾಯಾಚರಣೆಗಳಿರುವುದನ್ನು ಕಾಣಬಹುದು. ದಾಸಯ್ಯ ಗುಡ್ಡಯ್ಯರನ್ನು ಬಿಡುವುದು, ಮಣೆಸೇವೆ, ಹರಿಸೇವೆ ಮಾಡಿಸುವುದು, ಶ್ರಾವಣ ಶನಿವಾರ ಆಚರಣೆ, ಶನಿಮಹಾತ್ಮನ ಕಥೆ ಓದಿಸುವುದು, ಕಾರ್ತಿಕ ಸೋಮವಾರದ ಆಚರಣೆ, ಕೊಂತಿಪೂಜೆ, ನಾಗರಚೌತಿ–ಪಂಚಮಿ–ಷಷ್ಠಿ ಆಚರಣೆ, ನಾಗರ ಪ್ರತಿಷ್ಠೆ ಮಾಡಿಸುವುದು. ಮಾರಮ್ಮ ಹಾಗೂ ಊರಮೇಗಲಮ್ಮನಿಗೆ ನಡೆದುಕೊಳ್ಳುವುದು, ಕಳಸ ಪೂಜೆ ಅಥವಾ ಹೂವೀಳ್ಯ ಆಚರಣೆ, ಪರಮಾಡುವುದು, ಕರಗ ಉತ್ಸವ ಆಚರಣೆ ಮುಂತಾದ ಆಚರಣೆಗಳಿವೆ. ಮೈಸೂರು ತಾಲೂಕಿನಲ್ಲಿ ಆಚರಿಸುವ ಪ್ರಮುಖ ಧಾರ್ಮಿಕ ಹಬ್ಬಗಳನ್ನು ಸಂಕ್ಷಿಪ್ತವಾಗಿ ಇಲ್ಲಿ ವಿವರಿಸಲಾಗಿದೆ.

**ಯುಗಾದಿ :** ಈ ಹಬ್ಬದಂದು ಮನೆಯ ಮುಂದೆ ಮಾವು ಬೇವಿನ ತೋರಣ ಕಟ್ಟುತ್ತಾರೆ. ಮಿಂದು ಮಡಿಯನ್ನುಟ್ಟು ದೇವರಿಗೆ ಪೂಜೆ ಮಾಡಿ, ಬೇವು–ಬೆಲ್ಲ ತಿಂದು ಹಬ್ಬವನ್ನು ಸಡಗರದಿಂದ ಆಚರಿಸುವರು. ಸಾಮಾನ್ಯವಾಗಿ ಎಲ್ಲರೂ ಒಬ್ಬಟ್ಟು (ಹೋಳಿಗೆ) ಊಟ ಮಾಡುವುದು ಸಾಮಾನ್ಯ. ಮೈಸೂರು ನಗರ ಹಾಗೂ ಗ್ರಾಮಗಳಲ್ಲಿ ದೇವರ

ವಿಗ್ರಹಗಳನ್ನು ಗಂಗಾಸ್ಥಾನಕ್ಕೆ ತೆಗೆದುಕೊಂಡು ಹೋಗಿ ತೊಳೆದು ಪೂಜೆ ಮಾಡಿ (ಹೊಳೆ ಮೆಟ್ಟಿಸಿ) ಮೆರವಣಿಗೆ ಮೂಲಕ ದೇವಸ್ಥಾನಕ್ಕೆ ತರುವರು. ದನಕರುಗಳಿಗೆ ಮೈ ತೊಳೆದು ಪೂಜಿಸಿ, ಸಿಹಿ ತಿನ್ನಿಸುವರು. ಪುರೋಹಿತರಿಂದ ಯುಗಾದಿ ಪಂಚಾಂಗ ನೋಡಿಸಿ ಪ್ರಸ್ತುತ ವರ್ಷದ ಮಳೆ–ಬೆಳೆ, ಏಳು–ಬೀಳು ಆಗು–ಹೋಗುಗಳನ್ನು ತಿಳಿದುಕೊಳ್ಳುವರು. ರೈತರು ಹೊನ್ನಾರು ಕಟ್ಟುವರು.

**ಗೌರಿ ಗಣೇಶ ಹಬ್ಬ :** ಈ ಹಬ್ಬದಲ್ಲಿ ಹೆಣ್ಣುಮಕ್ಕಳಿಗೆ ಬಳೆ ತೊಡಿಸುವುದು, ಮದುವೆಯಾದ ಹೆಣ್ಣುಮಕ್ಕಳನ್ನು ತವರಿಗೆ ಕರೆದು, ಬಾಗಿನ ನೀಡುವುದು ಸಂಪ್ರದಾಯ. ಈ ಹಬ್ಬದಲ್ಲಿ ಶಾವಿಗೆ, ಕಡುಬು, ಅಕ್ಕಿಹಿಟ್ಟು, ಸೂಸಲು, ಕಾಯ್ಹಾಲು, ಒಬ್ಬಟ್ಟು ಮುಂತಾದ ವಿಶೇಷ ಅಡಿಗೆಗಳಿರುತ್ತವೆ. ಕೆಲವರು ಈ ಹಬ್ಬಗಳಲ್ಲೆ ತಮ್ಮ ಪೂರ್ವಿಕರಿಗೆ ಎಡೆ ಇಡುವುದುಂಟು. ಗೌರಿಹಬ್ಬ ಅಥವಾ ಸ್ವರ್ಣಗೌರಿವ್ರತದ ಮಾರನೆಯ ದಿನ ಗಣೇಶನನ್ನು ಪೂಜಿಸುವರು. ಆನಂತರ ಗೌರಿ–ಗಣೇಶ ಮೂರ್ತಿಯನ್ನು ವಿಸರ್ಜಿಸಲಾಗುತ್ತದೆ.

**ಮಹಾನವಮಿ (ನವರಾತ್ರಿ) :** ಮಹಾನವಮಿ, ಮರ್ಲಮಿ, ದಸರ, ಪಿತೃಪಕ್ಷ ಎಂದೆಲ್ಲ ಕರೆಯಲಾಗುವ ಈ ಹಬ್ಬವನ್ನು ಭಾದ್ರಪದ ಬಹುಳ ಪಾಡ್ಯದಿಂದ ಅಮಾವಸ್ಯೆವರೆಗೂ ಪಿತೃಪಕ್ಷ ಆಚರಿಸುವರು. ಅಂದು ಸಸ್ಯಾಹಾರಿಗಳು ಸಿಹಿಯೂಟ ಮಾಡಿದರೆ, ಮಾಂಸಹಾರಿಗಳು ಮಾಂಸ, ಮದ್ಯದ ಜೊತೆಗೆ ಅನೇಕ ಬಗೆಯ ಭಕ್ಷ್ಯ ಭೋಜ್ಯಗಳನ್ನು ತಯಾರಿಸಿ ಎಡೆ ಇಟ್ಟು ಪೂಜೆ ಮಾಡುವರು. ಆಯುಧಪೂಜೆಯಂದು ಎಲ್ಲಾ ಹಿಂದೂಗಳು ತಮ್ಮ ತಮ್ಮ ವಾಹನ, ವಸ್ತು, ಉಪಕರಣ ಮುಂತಾದವುಗಳಿಗೆ ಪೂಜೆ ಮಾಡುವರು.

ವಿಶ್ವವಿಖ್ಯಾತವಾಗಿರುವ ದಸರವನ್ನು ಮೈಸೂರಿನಲ್ಲಿ ವಿಜೃಂಭಣೆಯಿಂದ ಆಚರಿಸಲಾಗುತ್ತದೆ. ಆಶ್ವೀಜ ಶುದ್ಧ ಪಾಡ್ಯದಿಂದ ದಶಮಿಯವರೆಗೆ (ಹತ್ತು ದಿನಗಳವರೆಗೆ) ಈ ಹಬ್ಬವನ್ನು ದಶಹರ, ದಶರಾತ್ರಿ, ನವರಾತ್ರಿ ಎಂದೂ ಕರೆಯುವುದಿದೆ. ಮಹಾನವಮಿ ಹಾಗೂ ವಿಜಯದಶಮಿ ಬಹು ಮುಖ್ಯವಾದ ದಿನಗಳಾಗಿವೆ.

ಅಂತೆಯೇ ಕರ್ನಾಟಕದಲ್ಲಿ, ವಿಶೇಷವಾಗಿ ಮೈಸೂರಿನಲ್ಲಿ ಈ ಹಬ್ಬದ ಆಚರಣೆ ಬಹು ಹಿಂದಿನಿಂದಲೂ ಅನೂಚಾನವಾಗಿ ನಡೆದು ಬಂದಿದೆ. ವಿಜಯನಗರದ ಅರಸರಿಂದ ಬಳುವಳಿಯಾಗಿ ಪಡೆದ ಮೈಸೂರು ಒಡೆಯರು (ರಾಜ ಒಡೆಯರು ೧೬೧೦) ಇದನ್ನು ನಾಡಹಬ್ಬವಾಗಿ ಅದ್ದೂರಿಯಾಗಿ ಆಚರಿಸುವುದನ್ನು ರೂಢಿಸಿಕೊಂಡು ಬರುತ್ತಿದ್ದುದ್ದನ್ನು ೧೯೭೦ರ ದಶಕದಿಂದೀಚೆಗೆ ಕರ್ನಾಟಕ ಸರ್ಕಾರ ಮುಂದುವರೆಸಿಕೊಂಡು ಬರುತ್ತಿದೆ.

ದಸರೆಯ ಹತ್ತು ದಿನಗಳಲ್ಲಿಯೂ ಅರಮನೆ–ದೇವಾಲಯಗಳಲ್ಲಿ ವಿಶೇಷವಾದ ಪೂಜೆಗಳು ನಡೆಯುತ್ತವೆ. ವಿಜಯದಶಮಿಯಂದು ಬೆಳಿಗ್ಗೆ ಪಟ್ಟದ ಕತ್ತಿ, ಕುದುರೆ, ಆನೆ ಮೊದಲಾದವು ಬನ್ನಿಮಂಟಪಕ್ಕೆ ತೆರಳುತ್ತವೆ. ಸಂಜೆ ಜಗತ್ಪ್ರಸಿದ್ಧವಾದ, ವೈಭವೋಪೇತವಾದ ಜಂಬುಸವಾರಿ ಅಂಗವಾಗಿ ಹಿಂದೆ ಮಹಾರಾಜರು ಆನೆಯ

ಮೇಲೆ ಅಂಬಾರಿಯಲ್ಲಿ ಕುಳಿತು ಸಕಲ ಮರ್ಯಾದೆಗಳೊಡನೆ ಬನ್ನಿಮಂಟಪದ ಕಡೆ ರಾಜಬೀದಿಗಳಲ್ಲಿ ಮೆರವಣಿಗೆ ಹೊರಡುತ್ತಿದ್ದುದ್ದು ನಯನ ಮನೋಹರವಾದ ದೃಶ್ಯವೆನಿಸಿತ್ತು. ಇಡೀ ಮೈಸೂರು ನಗರವೇ ಸಂಭ್ರಮಪಡುತ್ತಿತ್ತಲ್ಲದೆ, ಈ ಉತ್ಸವವನ್ನು ನೋಡುವುದಕ್ಕೆಂದೇ ಲಕ್ಷಾಂತರ ಮಂದಿ ದೇಶ ವಿದೇಶಗಳಿಂದ ಆಗಮಿಸುತ್ತಿದ್ದರು. ಬನ್ನಿಮಂಟಪ ತಲುಪಿದ ಮೇಲೆ ಮಹಾರಾಜರು ಆನೆಯಿಂದಿಳಿದು ಕುದುರೆಯ ಮೇಲೆ ಕುಳಿತು ಸೈನ್ಯದ ಪರಿವೀಕ್ಷಣೆ ನಡೆಸುತ್ತಿದ್ದರು. ವಿಜಯನಗರದರಸರ ಕಾಲದಲ್ಲಿ ನಿಜವಾಗಿ ನಡೆಯುತ್ತಿದ್ದ ಕಪ್ಪ ಕಾಣಿಕೆಗಳ ಸಮರ್ಪಣೆ, ಸೈನ್ಯಗಳ ಪರಿವೀಕ್ಷಣೆ, ಅಖಾಡದಲ್ಲಿ ಜೀವದ ಹಂಗು ತೊರೆದು ಜಿದ್ದಾಜಿದ್ದಿನಿಂದ ನಡೆಸುತ್ತಿದ್ದ ಮಲ್ಲಯುದ್ಧ ಮೊದಲಾದವು ಮೈಸೂರರಸರಲ್ಲಿ ಸಾಂಕೇತಿಕವಾಗಿ ಉಳಿದುಕೊಂಡು ಬಂದಿವೆ.

ಹಿಂದೆ, ಪ್ರತಿ ಮನೆಯಲ್ಲೂ ಸಾಮಾನ್ಯವಾಗಿ ಗೊಂಬೆಗಳನ್ನು ಕೂರಿಸುವ ಸಂಪ್ರದಾಯವಿತ್ತು. ಮೈಸೂರಿನಲ್ಲಿ ಒಡೆಯರ ಆಡಳಿತ ಕೊನೆಗೊಂಡ ಮೇಲೆ ರಾಜ ದರ್ಬಾರು, ಜಂಬೂಸವಾರಿ ಮುಂತಾದವು ನಿಂತು ಹೋದವು. ಕೆಲವು ವರ್ಷಗಳ ಕಾಲ ಮಾಜಿ ಅರಸರು ಸ್ವಂತವಾಗಿ ಈ ಉತ್ಸವಗಳನ್ನು ನಡೆಸಿದರೂ ಹಿಂದಿನ ವೈಭವ ಉಳಿಯದಾಯಿತು. ಪ್ರವಾಸಿಗಳನ್ನು ಹೆಚ್ಚಾಗಿ ಆಕರ್ಷಿಸುತ್ತಿದ್ದ ಈ ನಗರದ ಆಕರ್ಷಣೆಯನ್ನುಳಿಸಿಕೊಳ್ಳಲು ಹಿಂದಿನಿಂದ ನಡೆದು ಬರುತ್ತಿದ್ದ ವಸ್ತು ಪ್ರದರ್ಶನ, ಅರಮನೆಯ ದೀಪಾಲಂಕಾರಗಳನ್ನು ಉಳಿಸಿಕೊಂಡು ಬಂದುದಲ್ಲದೆ ಜಂಬೂಸವಾರಿಗೆ ಬದಲು ಅದೇ ರೀತಿಯ ಭುವನೇಶ್ವರಿಯ, ಚಾಮುಂಡೇಶ್ವರಿಯ ಮೆರವಣಿಗೆ ನಡೆಸಲಾಗುತ್ತಿದ್ದು, ಇಂದು ಜನತಾ ದಸರವಾಗಿ ಮಾರ್ಪಾಡುಗೊಂಡಿದೆ. ಜಂಬೂಸವಾರಿಯ ಮುಂದೆ ತೆರಳುತ್ತಿದ್ದ ಭವ್ಯಸೈನ್ಯದ ಮೆರವಣಿಗೆಯ ಬದಲು ಈಗ ದೇಶದ ಸಂಸ್ಕೃತಿ, ಇತಿಹಾಸ ಬೆಳವಣಿಗೆಗಳನ್ನು ಪ್ರತಿನಿಧಿಸುವ ಸ್ತಬ್ಧ ಚಿತ್ರಗಳು, ಸ್ವಯಂ ಸೇವಾ ದಳಗಳು, ಜನಪದ ಕಲಾ ತಂಡಗಳು ಮೆರವಣಿಗೆಯಲ್ಲಿ ಪಾಲ್ಗೊಳ್ಳುತ್ತವೆ. ದಸರೆಯ ಅಂಗವಾಗಿ ಈಚೆಗೆ ಲಲಿತಕಲಾ ಪ್ರದರ್ಶನ, ವಸ್ತು ಪ್ರದರ್ಶನ, ಚಲನಚಿತ್ರೋತ್ಸವ, ಕವಿಗೋಷ್ಠಿ, ಕುಸ್ತಿ ಮುಂತಾದ ವಿವಿಧ ಬಗೆಯ ಸ್ಪರ್ಧೆಗಳು, ದಸರಾ ಕ್ರೀಡೋತ್ಸವ ಇತ್ಯಾದಿಗಳನ್ನೂ ಏರ್ಪಡಿಸಲಾಗುತ್ತಿದೆ.

**ಖಾಸಗಿ ದರ್ಬಾರು :** ೧೯೭೦ರವರೆಗಿನ ದಸರಾ ಅತ್ಯಂತ ಸಾಂಪ್ರದಾಯಿಕವಾಗಿ ರಾಜಮನೆತನದ ಕಟ್ಟಳೆಗನುಗುಣವಾಗಿ ಅದ್ದೂರಿಯಾಗಿ ನಡೆಯುತ್ತಿತ್ತು. ದಸರಾದಲ್ಲಿ ರಾಜಮನೆತನದವರು ಮಾತ್ರವಲ್ಲದೆ ನಾಡೇ ಸಂಭ್ರಮಗೊಳ್ಳುತ್ತಿತ್ತು. ಮೈಸೂರಿನ ಮನೆಗಳು, ಬೀದಿದೀಪಗಳು, ಉದ್ಯಾನಗಳು, ಬೀದಿಬೀದಿಗಳ ಸಾಲುಮರಗಳು – ಹೀಗೆ ನಗರಕ್ಕೆ ನಗರವೇ ಸುಣ್ಣಬಣ್ಣ ತೋರಣಗಳಿಂದ ಸಿಂಗಾರಗೊಳ್ಳುತ್ತಿತ್ತು.

ಮೈಸೂರು ಒಡೆಯರು ಆಚರಿಸುವ ದಸರಾ ಅರಮನೆಯೊಳಗಿನ ದಸರಾ (ಖಾಸಗಿ ದಸರಾ) ಹಾಗೂ ಅರಮನೆ ಹೊರಗಿನ ದಸರಾ (ಸಾರ್ವಜನಿಕ ದಸರಾ) ಎಂದು ಎರಡು ಬಗೆಗಳಲ್ಲಿ ನಡೆಯುತ್ತಿತ್ತು. ಜಂಬೂಸವಾರಿ, ಜಟ್ಟಿಕಾಳಗ, ಸಂಗೀತೋತ್ಸವ,

ರಾಜದರ್ಬಾರು ಇವು ಸಾರ್ವಜನಿಕವಾಗಿ ನಡೆಯುವ ದಸರಾವಾದರೆ ಅರಮನೆಯೊಳಗೆ ಸಾಂಪ್ರದಾಯಿಕವಾಗಿ ನಡೆಯುವ ವಿಧಿವಿಧಾನಗಳು 'ಖಾಸಗಿ ದಸರಾ' ಎನ್ನಿಸಿಕೊಳ್ಳುತ್ತದೆ. ಅರಸೊತ್ತಿಗೆ ಮುಗಿದು ಹೋಗಿದ್ದರೂ ಶ್ರೀಕಂಠದತ್ತ ನರಸಿಂಹರಾಜ ಒಡೆಯರು ಈಗಲೂ ಅರಮನೆಯೊಳಗೆ ಸಾಂಪ್ರದಾಯಿಕವಾಗಿ ಖಾಸಗಿ ದರ್ಬಾರು ನಡೆಸುತ್ತಾರೆ.

**ಖಾಸಗಿ ದಸರಾ :** ಆಶ್ವೀಜ ಶುದ್ಧ ಪಾಡ್ಯದಿಂದ ದಶಮಿಯವರೆಗಿನ ಹತ್ತೂ ದಿನಗಳು ಅರಮನೆಯೊಳಗೆ ದಸರಾಹಬ್ಬದ ವಿಧಿವಿಧಾನಗಳು ಮೊದಲಿನಂತೆ ಈಗಲೂ ಜರುಗುತ್ತವೆ. ನವರಾತ್ರಿಯ ಪ್ರಾರಂಭದಿಂದ ನವಮಿಯ ತನಕ ಶಕ್ತಿದೇವತೆಯ ವಿವಿಧ ಸ್ವರೂಪಗಳಾದ ಕುಮಾರಿ, ತ್ರಿಮೂರ್ತಿ, ಕಲ್ಯಾಣಿ, ರೋಹಿಣಿ, ಕಾಳಿ, ಚಂಡಿಕೆ, ಶಾಂಭವಿ, ದುರ್ಗಾ– ಇವರುಗಳಿಗೆ ಭಕ್ತಿಪೂರ್ವಕವಾಗಿ ಪೂಜಿಸಲಾಗುತ್ತದೆ. ಚಂಡಿಕಾ ಹೋಮ, ಬಲಿ, ಮಹಿಷವಧೆ, ಶಮೀಪೂಜೆ ಮೊದಲಾದವೂ ನಡೆಯುತ್ತದೆ. ೧೦೮ ಬಾರಿ ದೇವೀ ಭಾಗವತ ಪಠಣ ಮಾಡಿ, ಹತ್ತು ಜನ ವೇದಮೂರ್ತಿಗಳು ಸಪ್ತಶತಿ ಪಾರಾಯಣವಾಗುತ್ತದೆ. ಐವತ್ತೇಳು ಜನ ಪುರೋಹಿತರು ಪಾಲ್ಗೊಳ್ಳುವರು. ಬೆಂಡಿನ ಪ್ರತಿಕೃತಿ ಹಾಗೂ ಕುಂಕುಮದ ನೀರನ್ನು ಬಳಸಿ ಮಹಿಷವಧೆಯನ್ನು ಸಾಂಕೇತಿಕವಾಗಿ ಮಾಡಲಾಗುತ್ತದೆ. ಪ್ರತಿದಿನ ಅರಮನೆಯ ಕಲ್ಯಾಣಭವನದಲ್ಲಿ ರಾಣಿಯು ಒಡೆಯರ ಪಾದಪೂಜೆ ಮಾಡುವರು.

ದಸರಾ ಆರಂಭಗೊಳ್ಳುವ ಮೊದಲು ಶುಭಮುಹೂರ್ತದಲ್ಲಿ ರತ್ನ ಸಿಂಹಾಸನವನ್ನು ದಿವಾನ್ ಎ ಖಾಸ್ ಕೊಠಡಿಯಲ್ಲಿ ಪ್ರತಿಷ್ಠಾಪಿಸಿ ವಜ್ರ ವೈಢೂರ್ಯ, ಒಡವೆ ವಸ್ತ್ರಗಳಿಂದ ಅದನ್ನು ಸಿಂಗರಿಸುತ್ತಾರೆ. ಕನ್ನಡಿತೊಟ್ಟಿಯಲ್ಲಿ ಭದ್ರಾಸನವನ್ನು ಅಣಿಗೊಳಿಸಿ ಚಾಮುಂಡೇಶ್ವರಿ ಮೂರ್ತಿಯನ್ನು ಪ್ರತಿಷ್ಠಾಪಿಸಲಾಗುತ್ತದೆ. ಒಡೆಯರು ಪಾಡ್ಯದಂದು ಪ್ರಾತಃಕಾಲ ಬ್ರಾಹ್ಮೀಮುಹೂರ್ತದಲ್ಲಿ ವಿಧಿವಿಧಾನಗಳಿಂದ ಅಷ್ಟದ್ರವ್ಯಗಳನ್ನು ಬಳಸುವ ಎಣ್ಣೆ ಅರಿಸಿನ ಶಾಸ್ತ್ರ ಮಾಡುವರು. ಮುತ್ತೈದೆಯರು ಆರತಿ ಬೆಳಗಿದ ನಂತರ ಮಹಾರಾಜರ ಚೌಲ ಮಾಡುವರು. ಮಂಗಳಸ್ನಾನದ ಬಳಿಕ ಚಾಮುಂಡೇಶ್ವರಿಯನ್ನಿಟ್ಟಿರುವ ಕನ್ನಡಿ ತೊಟ್ಟಿಯಲ್ಲಿ ಗಣಪತಿ ಪೂಜೆ, ನವಗ್ರಹಗಳು, ಅಷ್ಟದಿಕ್ಪಾಲಕರು, ಗ್ರಾಮದೇವತೆ ಹಾಗೂ ಮನೆದೇವತೆಯಾದ ಚಾಮುಂಡಾಂಬೆಗೆ ವಿಧಿಬದ್ಧವಾಗಿ ಪೂಜಿಸುವರು. ಆನಂತರ ಕಳಸಪೂಜೆ, ಕಂಕಣಪೂಜೆ ಮಾಡಿ ಕಂಕಣಧಾರಣೆ ಮಾಡುತ್ತಾರೆ. ಇದರ ನಂತರ ಮಹಾರಾಜರು ದಸರಾ ಸಂಬಂಧ ಎಲ್ಲಾ ಪೂಜೆಗಳನ್ನೂ ಕೈಗೊಳ್ಳುವುದಕ್ಕೆ ಧಾರ್ಮಿಕವಾಗಿ ವಿಧಿಬದ್ಧರಾಗುವರು. ಆ ಕಂಕಣವನ್ನು ಬಿಚ್ಚುವವರೆಗೂ ಅವರು ಅರಮನೆಯ ಹೊರಗೆ ಹೋಗುವಂತಿಲ್ಲ. ಬಳಿಕ ದಿವ್ಯಾಭರಣಭೂಷಿತರಾಗಿ ಸಕಲ ಪರಿವಾರದೊಂದಿಗೆ ಮಂಗಳವಾದ್ಯ ಸಮೇತ ಆಗಮಿಸಿ ಖಾಸಗಿ ದರ್ಬಾರು ನಡೆಸುತ್ತಾರೆ.

ಅಂಬಾವಿಲಾಸದಲ್ಲಿ ಅಷ್ಟೊತ್ತಿಗಾಗಲೇ ಆಹ್ವಾನಿತ ಪ್ರಜಾಪ್ರಮುಖರು, ರಾಜಮನೆತನ, ಬಂಧುಬಳಗದವರು, ಅರಮನೆಯ ನಿಕಟವರ್ತಿಗಳು, ಅಧಿಕಾರಿಗಳು, ರಾಜಪುರೋಹಿತರು, ವಿದ್ವನ್ಮಂಡಲಿಯವರು ಮುಂತಾದವರೆಲ್ಲರೂ ಆಗಮಿಸಿರುತ್ತಾರೆ. ಸಕಲಸಿದ್ಧತೆಯಾದ

ನಂತರ ಮಹಾರಾಜರು ಸಿಂಹಾಸನದ ಕಡೆಗೆ ಬರುವಾಗ ಪರಾಕಿನವರು "ಗಾನವಿದ್ಯಾಲೋಲ, ಘನಸತ್ಯಶೀಲ, ದೀನಜನ ಪರಿಹಾರ, ಕರುಣಾಲವಾಲ.... ಒಡೆಯರ್ ಪಾದಾವಧಾನ ಬಲಮೇ" ಎಂದು ಪರಾಕು ಹಾಕಿದರೆ, ಉರ್ದು ಭಾಷೆಯಲ್ಲಿ ಖಬರ್‌ದಾರ್ ಹೋ ಜಾವೋ ಜಾ ಬಜಾನಿಗಾ ರಖೇ ಹುಯೇ ಸವಾರೀ ಏ ಬರಹಮತ್ ಹುಯೀ ಅಹಲೇ ದರ್ಬಾರ್ ರಹೇ ಅಪ್ನೀ ಅಪ್ನೀ ಜಗಹ್ ಪರ್, ಖಬರ್‌ದಾರ್" ಎಂದು ಉಗ್ಘಟಿಸುವರು. ಬೆಳ್ಳಿಯಕಟ್ಟಿಗೆಯವರು ಹಾಗೂ ಪರಾಕಿನವರ ನಡುವೆ ಮಹಾರಾಜರು ರಾಜಗಾಂಭೀರ್ಯದಿಂದ ಬಂದು ಶಾಸ್ತ್ರೋಕ್ತವಾಗಿ ಕಲಶ, ನವಗ್ರಹ ಹಾಗೂ ರಾಜಗುರುಗಳ ಪಾದಪೂಜೆ ಮಾಡುವರು. ಕಾಳಿಕಾ ಪುರಾಣದಲ್ಲಿ ಪ್ರಸ್ತಾಪಿಸಿರುವಂತೆ ಕರ್ನಾಟಕ ರತ್ನಸಿಂಹಾಸನವನ್ನು ಶುಭಲಗ್ನದಲ್ಲಿ ಶಾಸ್ತ್ರೋಕ್ತವಾಗಿ ಪೂಜಿಸಿ ರಾಜಪುರೋಹಿತರು ವೇದಮಂತ್ರಗಳನ್ನು ಉದ್ಘೋಷಿಸುತ್ತಿರುವಾಗ ಸಿಂಹಾಸನವನ್ನು ಮೂರು ಬಾರಿ ಪ್ರದಕ್ಷಿಣೆ ಹಾಕಿ ನಮಸ್ಕರಿಸಿ, ಅದರ ಮೇಲೆ ಮಲ್ಲಿಗೆ ಹೂವುಗಳನ್ನು ಚೆಲ್ಲಿ, ಸಿಂಹಾಸನದ ಏಳು ಮೆಟ್ಟಿಲುಗಳನ್ನು ಏರಿಹೋಗಿ, ಖಡ್ಗ ಹಿಡಿದು ಅದರ ಮೇಲೆ ನಿಲ್ಲುವರು. ಆ ತಕ್ಷಣ ಅರಮನೆಯ ದೀಪಗಳು ಹತ್ತಿಕೊಳ್ಳುತ್ತವೆ. ಆ ಸಂದರ್ಭದಲ್ಲಿ 'ಕಾಯೌ ಶ್ರೀಗೌರಿ...' ಎಂಬ ಪ್ರಾರ್ಥನಾ ಗೀತೆ ಹಾಡುವರು. ರಾಜರ ಗೌರವಾರ್ಥ ೨೧ ಕುಶಾಲತೋಪುಗಳು ಹಾರುತ್ತವೆ. ಮಹಾರಾಜರು ಗೌರವವನ್ನು ಸ್ವೀಕರಿಸಿ, ವಂದಿಸಿ, ಸಿಂಹಾಸನದ ಮೇಲೆ ಪೀಠಸ್ಥರಾಗುವರು. ಅದೇ ವೇಳೆಯಲ್ಲಿ ಪಟ್ಟದ ಹಸು, ಪಟ್ಟದ ಆನೆ ಹಾಗೂ ಪಟ್ಟದ ಕುದುರೆಗಳನ್ನು ಪೂಜಿಸುವರು. ಮಹಾರಾಜರು ಅನೇಕ ಮಠ ಮತ್ತು ದೇವಾಲಯಗಳಿಂದ ಬಂದ ಪ್ರಸಾದವನ್ನೂ ಮರ್ಯಾದೆಯನ್ನೂ ಸ್ವೀಕರಿಸುವರು. ಪಟ್ಟದಕತ್ತಿಯನ್ನು ಪೂಜಿಸಿ ತಮ್ಮ ಬಲಭಾಗದಲ್ಲಿಡುವರು. ಆನಂತರ ಪದ್ಧತಿಯಂತೆ ರಾಜಬಂಧುಗಳು, ದಿವಾನರು, ಅರಮನೆಯ ಸರದಾರರು, ಅಧಿಕಾರಿವರ್ಗದವರು ರಾಜರಿಗೆ ನಜರುಮುಜರೆಗಳನ್ನರ್ಪಿಸುವರು. ಸಭಿಕರೆಲ್ಲರೂ ಪುಷ್ಪ, ವೀಳ್ಯಗಳನ್ನು ಕೊಟ್ಟು ಪುನಃ ಮುಜರೆ ಮಾಡಿ ಹೋಗುವರು. ಆಗ ಸ್ತ್ರೀಯರೆಲ್ಲರೂ ಸಿಂಹಾಸನಕ್ಕೆ ನಮಸ್ಕರಿಸಿ ಗೌರವ ಸೂಚಿಸುವರು.

ಆನಂತರ ಮಹಾರಾಜರು ಸಿಂಹಾಸನದಿಂದಿಳಿದು ಮತ್ತೊಮ್ಮೆ ಅದಕ್ಕೆ ನಮಸ್ಕರಿಸಿ ಅರಮನೆಯ ಆರತಿತೊಟ್ಟಿಗೆ ಹೋಗಿ ಅಲ್ಲಿ ಅಂತಃಪುರದ ಸ್ತ್ರೀಯರಿಗೆ ದರ್ಶನ ನೀಡುವರು. ಅಲ್ಲಿ ಅವರು ಚಿನ್ನದ ಕಲಶದಲ್ಲಿರುವ ನೀರಿನಿಂದ ರಾಜರ ಪಾದಗಳನ್ನು ತೊಳೆದು ಮುತ್ತಿನಾರತಿ ಬೆಳಗಿ ರಾಜರಿಗೆ ದೃಷ್ಟಿ ತೆಗೆಯುವರು. ಅಲ್ಲಿಂದ ಬೀಳ್ಕೊಂಡ ರಾಜರು ತಮ್ಮ ಬಿಡಾರಕ್ಕೆ ಹೋಗಿ ಸ್ನಾನ ಮಾಡಿ ಮಡಿಯುಟ್ಟು ಚಾಮುಂಡೇಶ್ವರಿಗೆ ಪುನಃ ಪೂಜೆ ಮಾಡಿ ಬಂಧು ಬಾಂಧವರೊಂದಿಗೆ ಸಹಭೋಜನ ಮಾಡಿ ತಾಂಬೂಲ ಸ್ವೀಕರಿಸುವರು. ಅಂದಿನಿಂದ ಒಂಬತ್ತು ದಿನಗಳ ತನಕ ಪ್ರತಿ ದಿನ ಸಾಯಂಕಾಲ ಜಟ್ಟಿಗಳಿಂದ ಕುಸ್ತಿ ಪಂದ್ಯಗಳು; ಅಶ್ವಾರೋಹಿ, ಪದಾತಿದಳಗಳ ಕವಾಯತು ನಡೆಯುತ್ತವೆ. ಸರಸ್ವತೀಪೂಜೆ, ದುರ್ಗಾಪೂಜೆ, ಮುತ್ತಿನಾರತಿ, ಗೊಂಬೆಪೂಜೆಗಳೂ ನಡೆಯುತ್ತವೆ.

**ಬ್ರಿಟಿಷ್ ದರ್ಬಾರ್ :** ಮಹಾನವಮಿಯಂದು ಸಂಜೆ ಆಂಗ್ಲರಿಗಾಗಿ ಮಹಾರಾಜರು ಒಂದು ವಿಶೇಷ ದರ್ಬಾರನ್ನು ನಡೆಸುತ್ತಿದ್ದರು. ಇದನ್ನು 'ಬ್ರಿಟಿಷ್ ದರ್ಬಾರ್' ಎಂದು ಕರೆಯುತ್ತಿದ್ದರು. ಅಂದು ಸಂಜೆ ಸಂಸ್ಥಾನದ ಮುಖ್ಯ ಅತಿಥಿಗಳೂ, ಬ್ರಿಟಿಷ್ ರೆಸಿಡೆಂಟರೂ, ಯುರೋಪಿಯನ್ ಅತಿಥಿಗಳೂ ದರ್ಬಾರಿನಲ್ಲಿ ಭಾಗವಹಿಸಲು ನಾಲ್ಕು ಕುದುರೆಗಳ ಸಾರೋಟಿನಲ್ಲಿ ಬಂದಿಳಿಯುತ್ತಿದ್ದರು. ದರ್ಬಾರ್‌ಹಾಲ್‌ನ ಎರಡು ಪಕ್ಕಕ್ಕೂ ಕುಳಿತ ಸಾಮಾನ್ಯ ಸಭಿಕರಿಗಿಂತ ಎತ್ತರದ ಸ್ಥಳದಲ್ಲಿ ಅವರು ಕುಳಿತುಕೊಳ್ಳುತ್ತಿದ್ದರು. ಐರೋಪ್ಯ ಮಹಿಳೆಯರು ಮಹಾರಾಜರಿಗೆ ನಮಸ್ಕರಿಸಿ ಅವರಿಂದ ಪುಷ್ಪಗುಚ್ಛಗಳನ್ನು ಸ್ವೀಕರಿಸುತ್ತಿದ್ದರು. ಅರಮನೆಯ ಮುಂಭಾಗದ ಮೈದಾನದಲ್ಲಿ ನಡೆಯುತ್ತಿದ್ದ ಜಟ್ಟಿ ಕಾಳಗ ಮುಂತಾದ ಮನೋರಂಜನಾ ಕಾರ್ಯಗಳನ್ನು ವೀಕ್ಷಿಸಿದ ನಂತರ ತೆರಳುತ್ತಿದ್ದರು. ದರ್ಬಾರು ಮುಗಿಯುವ ಮೊದಲು ಸಿಡಿಮದ್ದಿನ ಪ್ರದರ್ಶನ ನಡೆಯುತ್ತಿತ್ತು.

ಅರಮನೆಯ ಆನೆಬಾಗಿಲಿನ ಎದುರು ಮರದ ವೇದಿಕೆಯನ್ನು ನಿರ್ಮಿಸಿ ಅದರ ಮೇಲೆ ಸಂಗೀತ ವಿದ್ವಾಂಸರು ಕಛೇರಿಗಳನ್ನು ನಡೆಸುತ್ತಿದ್ದರು. ಸಂಗೀತ ಕಛೇರಿ ನಡೆಯುವಾಗ ಚೈನ್‌ಪುಲ್ಲಿಯ ಸಹಾಯದಿಂದ ಆಸೀನ ಸಂಗೀತಗಾರರ ಸಮೇತ ವೇದಿಕೆಯನ್ನು ಮೇಲಕ್ಕೆ ಏರಿಸುತ್ತಿದ್ದರು. ಕಛೇರಿ ಮುಗಿದ ಮೇಲೆ ಅದನ್ನು ಕೆಳಗಿಳಿಸುತ್ತಿದ್ದರು. ಆನಂತರ ಮಹಾರಾಜರು ಅವರಿಗೆ ಬಹುಮಾನ, ಬಿರುದುಗಳನ್ನು ನೀಡಿ ಗೌರವಿಸುತ್ತಿದ್ದರು. ಜೊತೆಗೆ ಪ್ರತೀಸಂಜೆ ಅರಮನೆಯಂಗಳದಲ್ಲಿ ಪಾಶ್ಚಾತ್ಯ ಮತ್ತು ಕರ್ನಾಟಕದ ಪೊಲೀಸ್ ಹಾಗೂ ಅರಮನೆಯ ವಿಶೇಷ ವಾದ್ಯ ತಂಡಗಳ ಸಂಗೀತ ಪ್ರದರ್ಶನ ನಡೆಯುತ್ತಿತ್ತು.

**ದೀಪಾವಳಿ :** ನರಕಚತುರ್ದಶಿ, ಬಲಿಪಾಡ್ಯಮಿಗಳಿಂದೊಡಗೂಡಿದ ದೀಪಾವಳಿ ಸಂಭ್ರಮದ ಹಬ್ಬವಾಗಿದೆ. ಕೆಲವರು ದೀಪಾವಳಿಯಲ್ಲಿ ತಮ್ಮ ಹಿರಿಯರಿಗೆ ಎಡೆ ಹಾಕುವುದುಂಟು. ಮೈಸೂರುನಗರ ಹಾಗೂ ಕೆಲವು ಗ್ರಾಮಗಳಲ್ಲಿ ದೇವರೋತ್ಸವಗಳು ನಡೆಯುತ್ತವೆ. ಅಲ್ಲದೆ, ಮನೆಬಾಗಿಲಲ್ಲಿ ದೀಪ ಬೆಳಗಿಸಿ, ಪಟಾಕಿ ಸಿಡಿಸುವ ದೃಶ್ಯ ಸರ್ವೇ ಸಾಮಾನ್ಯವಾಗಿರುತ್ತದೆ.

**ಸಂಕ್ರಾಂತಿ :** ಅಂದು ಪವಿತ್ರ ನದಿಗಳಲ್ಲಿ ಮಿಂದು ಮಡಿಯುಟ್ಟು ತಮ್ಮ ಇಷ್ಟದೇವರ ಪೂಜಿಸಿ, ಪೊಂಗಲು ಹಾಗೂ ಹಲವಾರು ಬಗೆಯ ಸಿಹಿತಿಂಡಿಗಳನ್ನು ಮಾಡುವರು. ಅವರೆಕಾಯಿ, ಸಿಹಿಗೆಣಸು, ಕಡಲೆಕಾಯಿಗಳನ್ನು ಬೇಯಿಸಿ ತಿನ್ನುವುದುಂಟು. ನಗರಪ್ರದೇಶಗಳಲ್ಲಿ ಎಳ್ಳು, ಬೆಲ್ಲ, ಕೊಬ್ಬರಿ ಮುಂತಾದವುಗಳನ್ನು ಮಿಶ್ರಣ ಮಾಡಿ ಮನೆ ಮನೆಗೆ ಹಂಚುವ ಮೂಲಕ ಪರಸ್ಪರ ಸಿಹಿ ವಿನಿಮಯ ಮಾಡಿಕೊಳ್ಳುವ ರೂಢಿ ಇದೆ. ದನಕರುಗಳಿಗೆ ಮೈತೊಳೆದು ವಿವಿಧ ಬಗೆಯ ಬಣ್ಣಗಳನ್ನು ಕೋಡು ಹಾಗೂ ಮೈಗೆ ಲೇಪಿಸಿ ಪೂಜೆ ಮಾಡಿ ಪೊಂಗಲ್ ತಿನ್ನಿಸುವರು. ಗ್ರಾಮೀಣ ಪ್ರದೇಶದ ಕೆಲವು ಕಡೆ ಕಿಚ್ಚು ಹಾಯಿಸುವುದುಂಟು. ನೂರಾರು ಭಕ್ತರು ಮಲೆಮಹದೇಶ್ವರ ಬೆಟ್ಟ ಹಾಗೂ ಶಬರಿಮಲೆ ಅಯ್ಯಪ್ಪನ ದರ್ಶನಕ್ಕಾಗಿ ಹೋಗುವರು.

**ಮಹಾಶಿವರಾತ್ರಿ** : ಇದು ಶಿವಭಕ್ತರಿಗೆ ಪ್ರಮುಖ ಹಬ್ಬವಾಗಿದ್ದು, ಅಂದು ಶಿವನಿಗೆ ವಿಶೇಷ ಪೂಜೆ, ಆರಾಧನೆ ನಡೆಯುತ್ತವೆ. ನಗರ ಹಾಗೂ ಗ್ರಾಮಾಂತರ ಪ್ರದೇಶಗಳಲ್ಲಿರುವ ಶಿವಾಲಯಗಳನ್ನು ಚಿತ್ತಾಕರ್ಷಕವಾಗಿ ಸಿಂಗರಿಸುವರು. ದೇವಾಲಯಗಳಲ್ಲಿ ಅನೇಕ ಬಗೆಯ ಧ್ಯಾನ, ಜಪ ಜಾಗರಣೆಗಳೊಂದಿಗೆ ಶಿವಪುರಾಣ ಪುಣ್ಯಕಥೆಗಳು ಹಾಗೂ ಪೂಜಾ ವೈವಿಧ್ಯತೆಗಳ ವಿವಿಧ ಆರಾಧನೆ ವಿಜೃಂಭಣೆಯಿಂದ ಸಾಂಗವಾಗಿ ಜರುಗುವುದು. ಭಕ್ತರು ಅಂದು ಮುಂಜಾನೆಯಿಂದ ಸಂಜೆಯವರೆಗೆ ಉಪವಾಸವಿದ್ದು, ರಾತ್ರಿ ಶಿವಪೂಜೆ ನಂತರ ಫಲಾಹಾರ ಸೇವಿಸಿ ಜಾಗರಣೆ ಇದ್ದು, ಮರುದಿನ ಮುಂಜಾನೆ ಸ್ನಾನ ಮಡಿ ಮಾಡಿ ಪೂಜೆ ಮುಗಿಸಿ ಶಿವದರ್ಶನ ಮಾಡಿದನಂತರ ಊಟ ಮಾಡುವರು. ಸಾಮಾನ್ಯವಾಗಿ ಉಪ್ಪಿಟ್ಟು, ಅವಲಕ್ಕಿ, ಸಜ್ಜಿಗೆ, ರಸಾಯನ, ರವೆಉಂಡೆ, ಹಲವು ಬಗೆಯ ಹಣ್ಣುಹಂಪಲುಗಳನ್ನು ಉಪವಾಸದ ದಿನ ಸೇವಿಸುವರು.

ಇವುಗಳ ಜೊತೆಗೆ ಮೈಸೂರುನಗರ ಹಾಗೂ ತಾಲೂಕಿನಾದ್ಯಂತ ಹಿಂದುಗಳು ಗ್ರಾಮದೇವತೆಗಳ, ಕುಲದೇವತೆಗಳ, ಮನೆದೇವತೆಗಳ ಅನೇಕ ಹಬ್ಬಗಳನ್ನು ವರ್ಷಕ್ಕೊಂದು ಸಲ, ತಮಗನುಕೂಲವಾದಾಗ ಆಚರಿಸುವರು. ಉತ್ತನಳಮ್ಮ, ಗೌಡನಹಳ್ಳಮ್ಮ, ಬೂತಗಳ್ಳಮ್ಮ, ಚಿಕ್ಕದೇವಮ್ಮ, ಪಿರಿಯಾಪಟ್ಟಲದಮ್ಮ, ಕೋಟೆಮಾರಮ್ಮ, ಊರುಮಾರಮ್ಮ, ದಂಡಿನಮಾರಮ್ಮ, ಚೌಡಮ್ಮ, ಚಾಮುಂಡಮ್ಮ, ಮನೆಮಂಚಮ್ಮ, ಹುಲಿಯಮ್ಮ, ದೊಡ್ಡಮ್ಮತಾಯಿ, ಕಾಳಮ್ಮ, ಬನ್ನಂತಕಾಳಮ್ಮ, ಮಾಕ್ಕಮ್ಮ, ಸಿಡಿಯಮ್ಮ, ಆದಿಶಕ್ತಿ, ಮುಳುಕಟ್ಟಮ್ಮ, ಪಾಳುಗೋಡೆಮಂಜಮ್ಮ, ಮೊಲಾಲಮ್ಮ (ಗರಡಿದೇವತೆ) ಮುಂತಾದ ಸ್ತ್ರೀ ದೇವತೆಗಳನ್ನೂ ಮಲೆಮಾದೇಶ್ವರ, ನಂಜುಂಡೇಶ್ವರ, ರಾಚಪ್ಪಾಜಿ, ಸಿದ್ಧಾಪ್ಪಾಜಿ, ರಾಮದೇವರು, ಶನಿದೇವರು, ಬಿಳಿಗಿರಿರಂಗನಾಥ, ಶಂಬುಲಿಂಗೇಶ್ವರ, ಚೆಲುವನಾರಾಯಣ, ಸುಬ್ರಹ್ಮಣ್ಯ ಮುಂತಾದ ದೇವಾನುದೇವತೆಗಳ ಹಬ್ಬ ಹರಿದಿನ, ತೇರು, ತೆಪ್ಪ, ತಿರುನಾಳುಗಳನ್ನು ಅದ್ದೂರಿಯಾಗಿ ಆಚರಿಸುವರು.

ಜೈನರು, ಮುಸ್ಲಿಮರು ಹಾಗೂ ಕ್ರೈಸ್ತರೂ ರಾಜ್ಯದ ಇತರೆಡೆಯ ತಮ್ಮ ಸಮುದಾಯದವರು ನಡೆಸುವ ಕ್ರಮದಂತೆಯೇ ತಮ್ಮ ಹಬ್ಬಗಳನ್ನು ಆಚರಿಸುತ್ತಾರೆ. ಹಿಂದು-ಮುಸ್ಲಿಮರು ಸಾಮರಸ್ಯವಾಗಿ ಬಾಬಯ್ಯನ ಹಬ್ಬವನ್ನು ಮೈಸೂರು ನಗರದಲ್ಲಿ ವಿಜೃಂಭಣೆಯಿಂದ ಆಚರಿಸುತ್ತಾರೆ.

ಮೈಸೂರಿನಲ್ಲಿ ಸಂತ ಫಿಲೋಮಿನಾ ಅವರ ಹಬ್ಬ ಸಾವಿರಾರು ಯಾತ್ರಾರ್ಥಿಗಳನ್ನು ಆಕರ್ಷಿಸುತ್ತದೆ. ೧೯೬೦ರಲ್ಲಿ ವ್ಯಾಟಿಕನಿನಲ್ಲಿ ಆರಾಧನಾ ವಿಧಿಯಲ್ಲಿ ಆದ ಮಾರ್ಪಾಟಿನಿಂದಾಗಿ ಈ ಹಬ್ಬ ನಿಂತು ಹೋಗಿತ್ತಾದರೂ ೧೯೭೭ರಿಂದ ಪುನಃ ಆಗಸ್ಟ್ ೧೧ರಂದು ಈ ಹಬ್ಬವನ್ನು ಆಚರಿಸಲಾಗುತ್ತಿದೆ. ಅಂದು ಸಾವಿರಾರು ಭಕ್ತರು ಸೇರಿ ಚರ್ಚಿನಲ್ಲಿ ಸಾಮೂಹಿಕ ಪ್ರಾರ್ಥನೆ ಸಲ್ಲಿಸುವರು ಜಾತ್ರೆಯೋಪಾದಿಯಲ್ಲಿ ಜನ ಸೇರುವರು.

**ಜಾತ್ರೆಗಳು :** ಜಾತ್ರೆಯ ಸಡಗರ ಸಂಭ್ರಮವನ್ನು ಜನಪದರು ತಮ್ಮ ಬಂಧು ಬಳಗದವರ ಜೊತೆ ಸಾಮೂಹಿಕವಾಗಿ ಅನುಭವಿಸುವರು. ಉರುಳುಸೇವೆ, ಕೊಂಡ ಹಾಯುವುದು, ಪಲ್ಲಕ್ಕಿ ಉತ್ಸವ, ಮುಡಿಕೊಡುವುದು, ಬಲಿನೀಡುವುದು, ಬಾಯಿ ಬೀಗ ಚುಚ್ಚಿಸಿಕೊಳ್ಳುವುದು, ರಥಕ್ಕೆ ಹಣ್ಣು-ದವನ ಎಸೆಯುವುದು, ದೇವತೆಗಳಿಗೆ ವಸ್ತ್ರ ಒಡವೆಗಳನ್ನು ನೀಡುವುದು ಇವೇ ಮೊದಲಾದ ಹರಕೆಗಳನ್ನು ಸಲ್ಲಿಸುವುದುಂಟು. ಮೈಸೂರು ತಾಲೂಕಿನಲ್ಲಿ ಶಿಷ್ಟ ದೇವತೆಗಳ ಜಾತ್ರೆಗಳೂ ಗ್ರಾಮದೇವತೆಗಳ ಜಾತ್ರೆಗಳೂ ನಡೆಯುತ್ತವೆ. ಮೈಸೂರು ಒಡೆಯರ ಚಾಮುಂಡೇಶ್ವರಿಯ ಕುಲದೇವತೆ ಜಾತ್ರೆ ಪ್ರತಿವರ್ಷ ಆಶ್ವಯುಜ ಶುದ್ಧ ಹುಣ್ಣಿಮೆಯಂದು ರಥೋತ್ಸವವೂ ಆದಾದ ಎರಡು ದಿವಸಗಳಿಗೆ ದೇವಾಲಯಕ್ಕೆ ಹತ್ತಿರವಿರುವ ದೇವಿಕೊಳದಲ್ಲಿ ರಾತ್ರಿ ನಡೆಯುವ ತೆಪ್ಪೋತ್ಸವವೂ ಪ್ರಖ್ಯಾತವಾಗಿವೆ. ಈ ಸಮಯದಲ್ಲಿ ಸಹಸ್ರಾರು ಭಕ್ತರೂ ಪ್ರವಾಸಿಗರೂ ಇಲ್ಲಿಗೆ ಬರುತ್ತಾರೆ. ಬೆಟ್ಟದ ಪಕ್ಕದಲ್ಲಿರುವ ಗುಡಿಗಳ ಹತ್ತಿರ ಚಾಮುಂಡೇಶ್ವರಿಗೆ ಬಲಿ ನೀಡುವುದುಂಟು. ಕುರುಬರ ಹಳ್ಳಿಯ ಬನ್ನಂತ ಕಾಳಮ್ಮನಜಾತ್ರೆ, ಅರಮನೆ ಮಾರಮ್ಮನಜಾತ್ರೆ, ಮಹದೇಶ್ವರನ ಜಾತ್ರೆ, ತೊಣಚಿಕೊಪ್ಪಲಿನ ಬಿಸಿಲು ಮಾರಮ್ಮನ ಜಾತ್ರೆ, ಇಟ್ಟಿಗೆ ಗೂಡಿನ ರೇಣುಕಾ ದೇವಿ ಕರಗ ಮಹೋತ್ಸವ, ಕ್ಯಾತಮಾರನಹಳ್ಳಿ ಹುಲಿಯಮ್ಮನಜಾತ್ರೆ, ಉತ್ತನಹಳ್ಳಿ ಮಾರಮ್ಮನ ಜಾತ್ರೆ, ಸೋಮೇಶ್ವರದ ತೆಂಕಲಮ್ಮ ಜಾತ್ರೆ, ಮೆಲ್ಲಹಳ್ಳಿ ಮಂಚಮ್ಮನ ಜಾತ್ರೆ, ಸಿದ್ಧಲಿಂಗಪುರದ ಸುಬ್ರರಾಯನ ಷಷ್ಠಿ, ಬೂಗತಗಳ್ಳಿಯ ಬೇತಾಳಮ್ಮನ ಜಾತ್ರೆ, ಅನಗಳ್ಳಿಯ ಸಿಳ್ಳಪ್ಪನ ಜಾತ್ರೆ, ವರಕೋಡಿನ ಬೀರೇಶ್ವರನ ಜಾತ್ರೆ, ಸಿದ್ರಾಮನಹುಂಡಿಯ ಸಿದ್ರಾರಾಮೇಶ್ವರ ಜಾತ್ರೆ, ಜಡಿಕಟ್ಟೆಯ ಮಹದೇಶ್ವರನ ಜಾತ್ರೆ, ಕಡಕೊಳದ ಬೀರೇಶ್ವರ ಜಾತ್ರೆ, ಉದ್ಬೂರಿನ ನಾರಾಯಣಸ್ವಾಮಿ ಉತ್ಸವ, ಹಿನಕಲ್ಲಿನ ಮಾರಮ್ಮನ ಜಾತ್ರೆ, ಹೂಟಗಳ್ಳಿಯ ಇಲವಾಲದ ಮಾರಮ್ಮನ ಜಾತ್ರೆ ಮುಂತಾದವು ತಾಲೂಕಿನಲ್ಲಿ ನಡೆಯುವ ಪ್ರಮುಖ ಜಾತ್ರೆಗಳಾಗಿವೆ.

## ತಾಲೂಕಿನ ಪ್ರಮುಖ ಜಾತ್ರೆಗಳು

| ಸ್ಥಳ | ದೇವರು | ನಡೆಯುವ ಕಾಲ | ಎಷ್ಟು ದಿನ | ಸೇರುವ ಜನಸಂಖ್ಯೆ |
|---|---|---|---|---|
| ಚಾಮುಂಡಿಬೆಟ್ಟ | ಚಾಮುಂಡೇಶ್ವರಿ | ಸೆಪ್ಟೆಂಬರ್ ಅಕ್ಟೋಬರ್ | ಒಂದು ದಿನ | ೧ ಲಕ್ಷ |
| ಮೈಸೂರು | ದಸರಾ | ಆಶ್ವಿಜ ಮಾಸ | ಹತ್ತು ದಿನ | ೨ ಲಕ್ಷ |
| ಮೈಸೂರು (ಇಟ್ಟಿಗೆಗೂಡು) | ಚಾಮುಂಡೇಶ್ವರಿ-ಮಾರಮ್ಮ ಕರಗ | ಜೂನ್ | ಮೂರು ದಿನ | ೫ ಸಾವಿರ |
| ಸಿದ್ದಲಿಂಗಪುರ | ಸುಬ್ರಹ್ಮಣ್ಯೇಶ್ವರ | ಡಿಸೆಂಬರ್ ಜನವರಿ | ಒಂದು ದಿನ | ೧ ಲಕ್ಷ |